05 March 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ನಮ್ಮ ಬದುಕಿನಲ್ಲಿ ನಾವು ಸಂಗ್ರಹಿಸ ಬೇಕಾಗಿದ್ದು ಸಂತೋಷದ ಕ್ಷಣಗಳನ್ನೇ ಹೊರತು ದುಬಾರಿ ಮಾತುಗಳನ್ನಲ್ಲ!

-ಸ್ನೇಹಾ ಆನಂದ್

info.varthaman@gmail.com



ರಾಮನಗರ-ಬೆಂಗಳೂರಿಗೆ ಬಿಎಂಟಿಸಿ: ಹವಾನಿಯಂತ್ರಿತ ಬಸ್ ಸಂಚಾರ ಆರಂಭ — ಪುಟ ಸಂ. 2



ನಾಳೆ ವಿಶೇಷಚೇತನರ ಹಾಗೂ ಮಹಿಳೆಯರ ಕಾರ್ಯಾಗಾರ — ಪುಟ ಸಂ. 3



ಬಜೆಟ್‌ನಲ್ಲಿ ನೀರು ತುಂಬಿಸುವ ಯೋಜನೆಗೆ ಚಾಲನೆ ಯೋಜನೆ ಘೋಷಿಸಿ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 114 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಐ ಆಮ್ ಎ ಸ್ಟ್ರೀಟ್ ಫೈಟರ್!

**ಬೆಂಗಳೂರು:** ಐ ಆಮ್ ಎ ಸ್ಟ್ರೀಟ್ ಫೈಟರ್! ಹೇಗೆ ಹೋರಾಡಬೇಕೆಂದು ನನಗೆ ಗೊತ್ತು. ನನ್ನ ಹೋರಾಟ ಅಧಿಕಾರಕ್ಕಾಗಿ ಅಲ್ಲ. ಪಕ್ಷದೊಳಗಲ್ಲ. ನನ್ನ ಹೋರಾಟ ಪಕ್ಷದ ಹೊರಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಮಾರ್ಮಿಕವಾಗಿ ಮಾತನಾಡಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾನು ಮೌನವಾಗಿದ್ದೇನೆಂದು ನನ್ನ ವಿರೋಧಿಗಳು ಭಾವಿಸಿದರೆ ಅದು ಅವರ ಊಹೆ.



▸▸ ನನಗೆ ಸಿಗಬೇಕಾದ್ದು ಸಿಕ್ಕೇ ಸಿಗುತ್ತದೆ: ಡಿಕೆಶಿ

ನನಗೆ ಸಿಗಬೇಕಾದ್ದು ಸಿಕ್ಕೇ ಸಿಗುತ್ತದೆ. ಆದರೆ, ನಾನು ಮುಖ್ಯಮಂತ್ರಿ ಆಗಲು ಪಕ್ಷದೊಳಗೆ ಹೋರಾಟ ಮಾಡುವುದಿಲ್ಲ. ಬಂಡಾಯ ಎಬ್ಬಿಸಿ ಪಕ್ಷಕ್ಕೆ ದ್ರೋಹ ಮಾಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.ನಾನು ಏಕೆ ಬಂಡಾಯ ಮಾಡಬೇಕು? ನನಗೆ ನನ್ನ ಮೇಲೆ ವಿಶ್ವಾಸವಿದೆ. ನಾನು ಆಶಾ ಭಾವದಿಂದ ಬದುಕುತ್ತೇನೆ. ಮುಖ್ಯಮಂತ್ರಿಯ ವಿಷಯವಾಗಿ ನಾನು ಇದುವರೆಗೆ ಮಾತನಾಡಿಲ್ಲ. ಅದು ನನ್ನ, ಮುಖ್ಯಮಂತ್ರಿ ಮತ್ತು ಪಕ್ಷದ ಹೈಕಮಾಂಡ್ ನಡುವೆ ಇರುವ ವಿಷಯ ಎಂದು ಹೇಳಿದರು. ಕೆಲವು ನಿರ್ಧಾರಗಳು ತೆಗೆದುಕೊಳ್ಳುವಾಗ ನಾನು ಭಾಗಿಯಾಗಿದ್ದೆ ಎಂದು ಹೇಳುವುದನ್ನು ಹೊರತುಪಡಿಸಿ ಬೇರೆ ಯಾವುದೇ ಹೇಳಿಕೆ ನೀಡಿಲ್ಲ. ಮುಖ್ಯಮಂತ್ರಿ ಸ್ಥಾನ ಖಾಲಿಯಾಗ ಲಿದೆ ಅಥವಾ ದಲಿತರಿಗೆ ಅಥವಾ ಇನ್ನೊಬ್ಬರಿಗೆ ಆ ಸ್ಥಾನ ಸಿಗಬೇಕು ಎಂದು ನಾನು ಎಂದಿಗೂ ಹೇಳಿಲ್ಲ. ಮುಖ್ಯಮಂತ್ರಿ ಸ್ಥಾನವನ್ನು ಖಾಲಿ ಮಾಡುತ್ತಿರುವುದು ಇತರರೇ ಎಂದು ತಮ್ಮ ವಿರೋಧಿಗಳಿಗೆ ತಿರುಗೇಟು ನೀಡಿದರು.

# ಕಚ್ಚಾತೈಲ ಆಮದು ಈಗ ಬಲು ದುಬಾರಿ

## ದೇಶದ ಆರ್ಥಿಕತೆ ಮೇಲೆ ಪ್ರತಿಕೂಲ ಪರಿಣಾಮ | ಹಣದುಬ್ಬರ ಹೆಚ್ಚಳ

**ನವದೆಹಲಿ:** ಭಾರತವು ವಿದೇಶಗಳಿಂದ ಶೇ 80ರಷ್ಟು ಕಚ್ಚಾತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಹೀಗಾಗಿ ಸದ್ಯದ ಜಾಗತಿಕ ಬೆಳವಣಿಗೆಯು ದೇಶದ ಆರ್ಥಿಕತೆ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ. ರೂಪಾಯಿ ದುರ್ಬಲವಾಗಿರುವುದರಿಂದ ಆಮದು ದುಬಾರಿಯಾಗಲಿದೆ. ಹಣದುಬ್ಬರ ಹೆಚ್ಚಲಿದೆ ಎಂದು ಅಂದಾಜಿಸಲಾಗಿದೆ.

ಲೆಕ್ಕಚಾರದ ಪ್ರಕಾರ ಪ್ರತಿ ಬ್ಯಾರಲ್ ಕಚ್ಚಾತೈಲದ ಬೆಲೆ ಒಂದು ಡಾಲರ್ ಹೆಚ್ಚಳವಾದರೆ ವಾರ್ಷಿಕ ಆಮದು ವೆಚ್ಚವು 1.5 ಶತಕೋಟಿಯಿಂದ 2 ಶತಕೋಟಿವರೆಗೂ ಹೆಚ್ಚಳವಾಗಲಿದೆ. ಹೀಗಾಗಿ ಇದು ಜಿಡಿಪಿ ಮೇಲೆ ಶೇ.1.3ರಷ್ಟು ಬೀಳಲಿದೆ. 2025–26ರ ಮೂರನೇ ತ್ರೈಮಾಸಿಕದಲ್ಲಿ ಇದು ಶೇ 1.1ರಷ್ಟಿತ್ತು ಎಂದು ಆರ್‌ಬಿಐ ದಾಖಲೆಗಳು ಹೇಳುತ್ತವೆ. ಇಂಧನ ಮೇಲೆ ಅವಲಂಬಿತವಾಗಿರುವ ನಾಗರಿಕ ವಿಮಾನಯಾನ, ಸರಕು ಸಾಗಣೆ, ಪೇಂಟ್ ಮತ್ತು ರಾಸಾಯನಿಕ ತಯಾರಿಕಾ ಉದ್ಯಮದಲ್ಲಿ ವೆಚ್ಚ ಹೆಚ್ಚಾಗಲಿದೆ. ಇದು ಚಿಲ್ಲರೆ ಮಾರಾಟದ ಮೇಲೂ ಪರಿಣಾಮ ಬೀರಲಿದೆ.


ತೈಲ ಬೆಲೆ ಹೀಗೇ ಮುಂದುವರಿದರೆ ಹಣದುಬ್ಬರವನ್ನು ಆರ್‌ಬಿಐ ಮರು ಹೊಂದಾಣಿಕೆ ಮಾಡುವ ಸಾಧ್ಯತೆ ಇದೆ ಎಂದೆನ್ನಲಾಗಿದೆ. ಚಿಲ್ಲರೆ



ಹಣದುಬ್ಬರವನ್ನು ಶೇ.2.1ರಿಂದ ಶೇ2ಕ್ಕೆ ಆರ್‌ಬಿಐ ಇಳಿಸಿತ್ತು. ಆದರೆ ಜಾಗತಿಕ ಮಾರುಕಟ್ಟೆಯ ಸದ್ಯದ ಪರಿಸ್ಥಿತಿ ಹೀಗೇ ಮುಂದುವರಿದರೆ ಇನ್ನಷ್ಟು ಸುಧಾರಣಾ ಕ್ರಮಗಳನ್ನು ಆರ್‌ಬಿಐ ತರುವ ಸಾಧ್ಯತೆಗಳೂ ಇವೆ ಎನ್ನಲಾಗಿದೆ.

ಮತ್ತೊಂದೆಡೆ ರಫ್ತುದಾರರ ಲಾಭ ಹೆಚ್ಚಳವಾಗಲಿದೆ ಎಂದೂ ಅಂದಾಜಿಸಲಾಗಿದೆ. ಡಾಲರ್‌ನಲ್ಲಿ ಗಳಿಕೆ ಕಾಣುವ ಕಂಪನಿಗಳು ಸದ್ಯ ಸಂತಸದಲ್ಲಿವೆ. ಹೀಗಾಗಿ ಪ್ರತಿಯೊಂದು ಡಾಲರ್ ಹೆಚ್ಚಳವೂ ಅಧಿಕ ಲಾಭವನ್ನು ಅವರಿಗೆ ತಂದುಕೊಡುತ್ತಿದೆ. ಅದರಲ್ಲೂ, ಭಾರತದ ಐಟಿ, ಔಷಧ ತಯಾರಿಕೆ ಮತ್ತು ರಫ್ತುದಾರರಿಗೆ ಡಾಲರ್ ಮೌಲ್ಯ ಹೆಚ್ಚಳ ಲಾಭದಾಯಕವಾಗಿದೆ. ದೀರ್ಘಕಾಲಿಕ ಜಾಗತಿಕ ಗುತ್ತಿಗೆ ಹೊಂದಿರುವ ಕಂಪನಿಗಳಿಗೆ ನಿರಂತರವಾಗಿ ಕುಸಿಯುತ್ತಿರುವ ಪುಟ 2ಕ್ಕೆ

### ರೂಪಾಯಿ ದಾಖಲೆ ಕುಸಿತ: ಡಾಲರ್‌ಗೆ 92.27 ದಾಖಲು



**ಮುಂಬೈ:** ಅಮೆರಿಕದ ಡಾಲರ್ ಎದುರು ರೂಪಾಯಿ 78 ಪೈಸೆ ಕುಸಿಯುವ ಮೂಲಕ ಸಾರ್ವಕಾಲಿಕ ಕುಸಿತ ದಾಖಲಿಸಿದೆ. ಕಚ್ಚಾತೈಲ ಬೆಲೆ ಏರಿಕೆ ಮತ್ತು ಜಾಗತಿಕ ರಾಜಕೀಯ ಸಂಘರ್ಷಗಳಿಂದ ಪ್ರತಿ ಡಾಲರ್‌ಗೆ ಬುಧವಾರ 92.27ರಷ್ಟು ದಾಖಲಾಯಿತು.

ಇರಾನ್ ಯುದ್ಧದಿಂದಾಗಿ ಕಚ್ಚಾತೈಲ ಬೆಲೆ ಪ್ರತಿ ಬ್ಯಾರಲ್‌ಗೆ 82 ಅಮೆರಿಕನ್ ಡಾಲರ್‌ನಷ್ಟು ಹೆಚ್ಚಳವಾಗಿದೆ. ಇದರ ಪರಿಣಾಮ ದೇಶೀಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ತೀವ್ರ ಒತ್ತಡಕ್ಕೆ ಪುಟ 2ಕ್ಕೆ

## ಕರ್ನಾಟಕ ವಿದ್ಯುತ್ ನಿಗಮ ಮುಳುಗುತ್ತಿದೆಯೇ...?

▸▸ **ಎಚ್ ಆರ್ ಶ್ರೀಶಾ**

ಕರ್ನಾಟಕ ವಿದ್ಯುತ್ ನಿಗಮ ಸಂಸ್ಥೆ ಮುಳುಗುತ್ತಿದೆಯೇ ಎಂಬ ಪ್ರಶ್ನೆ ಈಗ ಎಲ್ಲ ಕಡೆ ಕೇಳಿ ಬರುತ್ತಿದೆ. ದೇಶದಲ್ಲೇ ಮೊದಲ ಜಲ ವಿದ್ಯುತ್ ಕೇಂದ್ರ ಸ್ಥಾಪಿಸಿದ ಈ ಸಂಸ್ಥೆ ನಷ್ಟದಲ್ಲೇನೂ ಇಲ್ಲ. ಈಗಲೂ ಈ ಸಂಸ್ಥೆ ಉತ್ಪಾದಿಸುವ ವಿದ್ಯುತ್ತಿಗೆ ಬೇಡಿಕೆ ಇದ್ದೇ ಇದೆ. ಆದರೂ ಮುಳುಗುತ್ತಿರುವುದು ಏಕೆ ಎಂಬ ಪ್ರಶ್ನೆ ಕಾಡುವುದು ಸಹಜ.

ಸ್ವಾತಂತ್ರ್ಯ ಪೂರ್ವದಲ್ಲೇ ಮೈಸೂರು ಅರಸರು ಮತ್ತು ಎಂಜಿನಿಯರ್‌ಗಳು ವಿದ್ಯುತ್ ಉತ್ಪಾದನೆ ಮತ್ತು ಬಳಕೆಯ ಬಗ್ಗೆ ಹಲವು ಪ್ರಯೋಗಗಳನ್ನು ಕೈಗೊಂಡಿದ್ದರು. ಹೀಗಾಗಿ ವಿದ್ಯುತ್ ರಂಗದಲ್ಲಿ ಬದಲಾವಣೆ ಬಂದಂತೆ ಕೆಪಿಸಿ ಕಾರ್ಯವಿಧಾನವೂ ಬದಲಾಗುತ್ತ ಬಂದಿತು.

ಮೊದಲು ಜಲ ವಿದ್ಯುತ್ ಸಾಕಾಗಿತ್ತು. ಆಮೇಲೆ ಥರ್ಮಲ್ ಘಟಕಗಳು ತಲೆಎತ್ತಿದವು. ನಂತರದ ದಿನಗಳಲ್ಲಿ ಸೋಲಾರ್, ಪವನ ವಿದ್ಯುತ್ ಯೋಜನೆಗಳನ್ನು ತಲೆ ಎತ್ತಿದವು. ಅಲ್ಲಿಯವರೆಗೆ ಖಾಸಗಿ ವಲಯದಲ್ಲಿ ವಿದ್ಯುತ್ ಉತ್ಪಾದನೆ ಇರಲಿಲ್ಲ. ಕೇಂದ್ರ ಸರ್ಕಾರ 2003ರಲ್ಲಿ ವಿದ್ಯುತ್ ಕಾಯ್ದೆಗೆ ತಿದ್ದುಪಡಿ ತಂದು ಖಾಸಗಿಯವರು ಕಾಲಿಡಲು ಅವಕಾಶವಾಯಿತು. ಈಗ ಸೋಲಾರ್ ಮತ್ತಿತರ ವಿದ್ಯುತ್ ಯೋಜನೆಗಳಲ್ಲಿ ಖಾಸಗಿಯವರ ಪ್ರಾಬಲ್ಯ ಅಧಿಕಗೊಂಡಿದೆ. ಮುಂದಿನ ದಿನಗಳಲ್ಲಿ ಅಣುವಿದ್ಯುತ್ನಲ್ಲೂ ಖಾಸಗಿ ಕಂಪನಿಗಳು ತಲೆ ಎತ್ತಲಿವೆ. ಈಗ ಸರ್ಕಾರಕ್ಕಿಂತ ಖಾಸಗಿ ಕಂಪನಿಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಮಹತ್ವ ನೀಡಲು ಆರಂಭಿಸಿದೆ. ಹೀಗಾಗಿ ಕೆಪಿಸಿ ಸರ್ಕಾರಿ ಸಂಸ್ಥೆಯಾಗಿ ಸಮರ್ಪಕವಾಗಿ ನಿರ್ವಹಿಸುತ್ತಿದ್ದರೂ ಸರ್ಕಾರದ ಅವಕೃಪೆಗೆ ಒಳಗಾಗಿದೆ. ಹೊಸ ಯೋಜನೆಗಳು ಯಾವುದೂ ಇಲ್ಲ. ಒಂದೇ ಒಂದು ಯೋಜನೆ ಎಂದರೆ ಶರಾವತಿ ಪಂಪ್ಡ್ ಸ್ಟೋರೇಜ್ ಸಿಸ್ಟಂ. ಇದಕ್ಕೆ ಪರಿಸರವಾದಿಗಳ ವಿರೋಧವಿದೆ. ಆದರೂ ಸರ್ಕಾರ ಮೊಂಡುವಾದ ಮಂಡಿಸುತ್ತಿದೆ. ಪಂಪ್ಡ್ ಸ್ಟೋರೇಜ್ ಸಿಸ್ಟಂ ರಾತ್ರಿ ವೇಳೆ ವಿದ್ಯುತ್ ಪೂರೈಕೆಯಲ್ಲಿ ಸಮತೋಲನ ಕಾಯ್ದುಕೊಳ್ಳಬಹುದು ಎಂಬ ಅಂಶ ಹೊರತುಪಡಿಸಿದರೆ ಶರಾವತಿಯಲ್ಲೇ ಮಾಡಬೇಕೆಂಬ ತುರ್ತು ಏನೂ ಇಲ್ಲ. ಬೇರೆ ಜಲ ವಿದ್ಯುತ್ ಯೋಜನೆಗಳಲ್ಲೂ ಪುಟ 2ಕ್ಕೆ



## ನಿಯಮ ಉಲ್ಲಂಘಿಸಿ ಪ್ರತಿಭಟಿಸಿದರೆ ಎಫ್‌ಐಆರ್: ಪರಮೇಶ್ವರ್ ಎಚ್ಚರಿಕೆ

**ಬೆಂಗಳೂರು:** ಇರಾನ್ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆ ಖಂಡಿಸಿ ರಾಜ್ಯದಲ್ಲಿ ಪ್ರತಿಭಟನೆ ನಡೆಸುವ ಸಂದರ್ಭದಲ್ಲಿ ನಿಯಮಗಳನ್ನು ಉಲ್ಲಂಘಿಸಿದವರ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.




ನಗರದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಪ್ರತಿಭಟನೆಗಳ ಬಗ್ಗೆ ದೃಢವಾದ ನಿಲುವನ್ನು ತೆಗೆದುಕೊಂಡಿದೆ ಮತ್ತು ನಗರದಲ್ಲಿ ಯಾವುದೇ ಸಭೆ ಸೇರಲು ಅನುಮತಿ ಅಗತ್ಯವಿದೆ ಎಂದು ಹೇಳಿದರು.

ಅನುಮತಿ ಇಲ್ಲದೆ ಪುಟ 2ಕ್ಕೆ

## ಕಾವೇರಿ ನದಿಗೆ ಹಾರಿ ಮಹಿಳೆ ಆತ್ಮಹತ್ಯೆ

**ಚಾಮರಾಜನಗರ:** ಕಾವೇರಿ ನದಿಗೆ ಹಾರಿ ಮಹಿಳೆಯೊಬ್ಬಳು ಆತ್ಮಹತ್ಯೆಗೆ ಶರಣಾದ ಘಟನೆ ಕೊಳ್ಳೇಗಾಲ ತಾಲೂಕಿನ ಸತ್ತೇಗಾಲ ಹ್ಯಾಂಡ್ ಪೋಸ್ಟ್ ಬಳಿ ನಡೆದಿದೆ. ಆತ್ಮಹತ್ಯೆಗೆ ಶರಣಾದ ಮಹಿಳೆಯನ್ನು ರಶ್ಮಿ (39) ಎಂದು ಗುರುತಿಸಲಾಗಿದೆ



ಪತಿ ಲೋಕೇಶ್ ಹಾಗೂ ಮಕ್ಕಳ ಜೊತೆ ಬೆಂಗಳೂರಿನಲ್ಲಿ ನೆಲೆಸಿದ್ದರು. ಸಂಸಾರದ ವಿಚಾರದಲ್ಲಿ ಬೇಸತ್ತು ವೆಸ್ಲಿ ಸೇತುವೆಯಿಂದ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಶವವನ್ನು ನದಿಯಿಂದ ಪೊಲೀಸರು ಮೇಲೆತ್ತಿದ್ದಾರೆ. ಕೊಳ್ಳೇಗಾಲ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಪರಿಶಿಷ್ಟರ ಅನುದಾನ ದುರ್ಬಳಕೆ ಸರಿಯಲ್ಲ

### ಎಸ್.ಸಿ.ಪಿ, ಟಿ.ಎಸ್.ಪಿ ಕಾಯ್ದೆಯಡಿ ಸಮರ್ಪಕ ಬಳಕೆಗೆ ಲಕ್ಷ್ಮೀಕಾಂತ ರೆಡ್ಡಿ ಸೂಚನೆ

**ಮೈಸೂರು:** ಪರಿಶಿಷ್ಟ ಸಮುದಾಯಗಳಿಗೆ ಎಸ್.ಸಿ.ಪಿ, ಟಿ.ಎಸ್.ಪಿ ಕಾಯ್ದೆಯಡಿ ಮೀಸಲಿಟ್ಟಿರುವ ಅನುದಾನವನ್ನು ಸಮರ್ಪಕವಾಗಿ ಬಳಕೆ ಮಾಡಬೇಕು. ಅರ್ಹ ಫಲಾನುಭವಿಗಳಿಗೆ ಸೌಲಭ್ಯ ದೊರೆಯುವಂತೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕು ಎಂದು ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ ಸೂಚನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆವತಿಯಿಂದ ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಹಾಗೂ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಅನುಷ್ಠಾನ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.



ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಕುಂದುಕೊರತೆ ಸಭೆಯನ್ನು 3 ತಿಂಗಳಿಗೊಮ್ಮೆ ನಡೆಸಲಾಗುತ್ತದೆ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ಮೀಸಲಿಟ್ಟಿರುವ ನಿವೇಶನಗಳನ್ನು ಅರ್ಹ ಫಲಾನುಭವಿಗಳಿಗೆ ನೀಡದೆ ಬೇರೆ ಫಲಾನುಭವಿಗೆ ನೀಡಲಾಗುತ್ತಿದೆ ಎಂಬ ದೂರುಗಳು ಬಂದಿವೆ. ಈ ಬಗ್ಗೆ ಪರಿಶೀಲನೆ ಮಾಡಲಾಗುವುದು. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಜನಾಂಗದ ಜನರು ವಾಸವಿಲ್ಲದ ಕಡೆ ಅವರಿಗೆ ಮೀಸಲಿರುವ ಅನುದಾನ ಬಳಕೆ ಮಾಡಿ ರಸ್ತೆ ನಿರ್ಮಾಣ ಚರಂಡಿ ನಿರ್ಮಾಣ ಮಾಡುವುದು ಗಮನಕ್ಕೆ ಬಂದಿದೆ. ಈ ಬಗ್ಗೆ ತನಿಖೆ ಮಾಡಲಾಗುವುದು ಎಂದು ಹೇಳಿದರು. ಸರ್ಕಾರದಿಂದ ನೀಡಲಾಗುವ ನಿರ್ದೇಶನದಂತೆ ಅಭಿವೃದ್ಧಿ ಪುಟ 2ಕ್ಕೆ

## ವಿದೇಶ ಪ್ರವಾಸ: ಶಾಸಕರು ವಾಪಸ್

### ರಾಜಕೀಯ ಚರ್ಚೆ ನಡೆದಿಲ್ಲ | ಶಾಸಕ ದೇವೇಂದ್ರಪ್ಪ ಪ್ರತಿಕ್ರಿಯೆ

**ಬೆಂಗಳೂರು:** ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಪ್ರವಾಸಕ್ಕೆ ತೆರಳಿದ್ದ ರಾಜ್ಯದ ಕಾಂಗ್ರೆಸ್ ಶಾಸಕರು ಬುಧವಾರ ಬೆಂಗಳೂರಿಗೆ ವಾಪಸ್ ಆಗಿದ್ದಾರೆ.

ವಿದೇಶ ಪ್ರವಾಸದ ಕುರಿತು ಮಾಧ್ಯಮಗಳೊಂದಿಗೆ ಜಗಳೂರು ಶಾಸಕ ದೇವೇಂದ್ರಪ್ಪ ಪ್ರತಿಕ್ರಿಯಿಸಿ, ಆಸ್ಟ್ರೇಲಿಯಕ್ಕೆ ಹೋಗಿ ನಾವು ಯಾವ ರಾಜಕೀಯ ಮಾಡೋಕೆ ಆಗುತ್ತೆ? ಇಲ್ಲಿ ಇದ್ರೆನೇ ನಾವು ಯಾವ ರಾಜಕೀಯವೂ ಮಾಡಿಲ್ಲ. ನಮ್ಮ ನಾಯಕರಲ್ಲಿ ಏನೂ ಗೊಂದಲಗಳಿಲ್ಲ. ರಾಜಕೀಯ ಚರ್ಚೆಗೂ ಈ ಪ್ರವಾಸಕ್ಕೂ ಯಾವುದೇ ಸಂಬಂಧವಿಲ್ಲ. ಟೀ ಕುಡಿಯುವ ಸಮಯದಲ್ಲೂ ರಾಜಕೀಯ ಮಾತಾಡಿಲ್ಲ. ಮೂರು ವರ್ಷದಿಂದ ಇದೇ ಚರ್ಚೆ ಆಗುತ್ತದೆ. ಕುಟುಂಬದ ಜೊತೆಗೆ ಹೋಗಿ ನಾವು ರಾಜಕೀಯ ಮಾಡಲು ಆಗುತ್ತದೆಯೇ? ನಿಜವಾಗ್ಲೂ ರಾಜಕೀಯ ಮಾಡಲು ಹೋಗಿದ್ದರೆ ನಾವು ಮಾಧ್ಯಮಕ್ಕೆ ಸಿಗುತ್ತಿರಲಿಲ್ಲ ಎಂದು ಹೇಳಿದರು.

ಪ್ರವಾಸದ ಜೊತೆಗೆ ಅಧ್ಯಯನಕ್ಕೆ ಹೋಗಿದ್ದೆವು. ಹೈನುಗಾರಿಕೆ, ಕಾನೂನು ಎಲ್ಲದರ ಬಗ್ಗೆ ಅಧ್ಯಯನ ಮಾಡಿದ್ದೇವೆ. ಆ ದೇಶಗಳಲ್ಲಿನ ವ್ಯವಸ್ಥೆ ಅಳವಡಿಸಿಕೊಳ್ಳುವ ಅಗತ್ಯ



ಇದೆ. ನಮ್ಮ ಕ್ಷೇತ್ರಗಳಲ್ಲಿ ನಾವು ಅಧ್ಯಯನ ಮಾಡಿಕೊಳ್ಳುತ್ತೇವೆ ಎಂದು ಹೇಳಿದರು.

ಶಾಸಕ ಪುಟ್ಟರಂಗಶೆಟ್ಟಿ ಮಾತನಾಡಿ, ಹೈನುಗಾರಿಕೆ, ಅಲ್ಲಿನ ರಸ್ತೆಗಳನ್ನ ನೋಡಲು ಹೋಗಿದ್ದೆವು. ಸರ್ಕಾರಕ್ಕೆ ಹೇಗೆ ರಸ್ತೆ ಮಾಡಬೇಕು ಎಂದು ಹೇಳುತ್ತೇನೆ. ರಾಜಕೀಯ ಇಲ್ಲಿ ಬಂದ ಮೇಲೆ ಮಾಡೋದು, ಅಲ್ಲಿ ಹೋಗಿ ರಾಜಕೀಯ ಮಾಡಿಲ್ಲ ಎಂದು ತಿಳಿಸಿದರು.

ಸಿರಗುಪ್ಪ ಶಾಸಕ ಬಿಎಂ ನಾಗರಾಜ್ ಮಾತನಾಡಿ, ಆಸ್ಟ್ರೇಲಿಯಾ ನ್ಯೂಜಿಲೆಂಡ್ ಹೋಗಿ ಬಂದೆವು. ಪುಟ 2ಕ್ಕೆ

## ಶಾಲೆಯಲ್ಲಿಯೇ ಶಿಕ್ಷಕನಿಗೆ ಹೃದಯಾಘಾತದಿಂದ ಸಾವು

**ಹಾಸನ:** ತರಗತಿಯಲ್ಲಿ ಪಾಠ ಮಾಡುತ್ತಿದ್ದಾಗಲೇ ಸರ್ಕಾರಿ ಶಾಲೆ ಮುಖ್ಯಶಿಕ್ಷಕ ಹೃದಯಾಘಾತದಿಂದ ಮೃತಪಟ್ಟ ದುರ್ಘಟನೆ ಅರಕಲಗೂಡು ತಾಲೂಕಿನ ಕಬ್ಬೆಕೊಪ್ಪಲು ಗ್ರಾಮದಲ್ಲಿ ನಡೆದಿದೆ.



ಮೃತಪಟ್ಟ ಶಿಕ್ಷಕರನ್ನು ಕೇರಳಾಪುರ ಗ್ರಾಮದ ಸತೀಶ್ (53) ಎಂದು ಗುರುತಿಸಲಾಗಿದೆ. ಕಬ್ಬೆಕೊಪ್ಪಲು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮುಖ್ಯ ಶಿಕ್ಷಕರಾಗಿದ್ದರು. ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಿದ್ದ ವೇಳೆ ಸತೀಶ್ ಏಕಾಏಕಿ ಅಸ್ವಸ್ಥಗೊಂಡು ಕೊಠಡಿಯಲ್ಲೇ ಕುಸಿದು ಬಿದ್ದಿದ್ದಾರೆ. ಇದನ್ನು ಗಮನಿಸಿದ ವಿದ್ಯಾರ್ಥಿಗಳು ಹಾಗೂ ಸಹಶಿಕ್ಷಕರು ಕೂಡಲೇ ನೆರವಿಗೆ ಧಾವಿಸಿ ಅಂಬ್ಯುಲೆನ್ಸ್ ಕರೆ ಮಾಡಿದ್ದಾರೆ. ಆದರೆ ತೀವ್ರ ಹೃದಯಾಘಾತದಿಂದಾಗಿ ಮೃತಪಟ್ಟಿದ್ದಾರೆ. ಶಿಕ್ಷಕರ ಅಕಾಲಿಕ ಪುಟ 2ಕ್ಕೆ

## ಅಪಘಾತ: ಒಂದೇ ಕುಟುಂಬದ ಐವರ ಸಾವು

**ಚಿತ್ತೂರು:** ಬೆಂಗಳೂರಿನಿಂದ ತಿರುಪತಿಗೆ ಹೊರಟಿದ್ದ ಕಾರು ಆಂಧ್ರಪ್ರದೇಶದ ಚಿತ್ತೂರು ಬಳಿ ಅಪಘಾತಕ್ಕೀಡಾಗಿದೆ. ಅಪಘಾತದಲ್ಲಿ ಬೆಂಗಳೂರಿನ ಒಂದೇ ಕುಟುಂಬದ ಐವರು ಸಾವನ್ನಪ್ಪಿದ್ದಾರೆ.

ಚಿತ್ತೂರು ಜಿಲ್ಲೆಯ ಪಲಮನೇರು ಬಳಿ ಅಪಘಾತ ನಡೆದಿದೆ. ಲಾರಿಗೆ ಹಿಂಬದಿಯಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಕಾರಿನಲ್ಲಿದ್ದ ಎಲ್ಲರೂ ಸಾವನ್ನಪ್ಪಿದ್ದಾರೆ. ಮೃತರನ್ನು ಮೋಹನ್‌ದಾಸ್ (71), ನಾಗರಾಜ್ (61) ಕುಸುಮಾ (61) ಜಯಂತಿ (59) ಪೂಜಾ (33) ಎಂದು ಗುರುತಿಸಲಾಗಿದೆ.

ಮೃತರು ಬೆಂಗಳೂರಿನ ರಾಜಾಜಿ ನಗರದ ನಿವಾಸಿಗಳು. ಬೆಂಗಳೂರಿನಿಂದ ತಿರುಪತಿ ದೇಗುಲಕ್ಕೆ ತೆರಳುತ್ತಿದ್ದಾಗ ಈ ದುರ್ಘಟನೆ ನಡೆದಿದೆ ಎಂದು ತಿಳಿದು ಬಂದಿದೆ, ಅತಿ ವೇಗದಲ್ಲಿ ಬಂದ




ಕಾರು ಲಾರಿಗೆ ಡಿಕ್ಕಿ ಹೊಡೆದ ಪರಿಣಾಮ ಕಾರಿನ ಮುಂಭಾಗ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಘಟನೆ ಬಳಿಕ ಸ್ಥಳಕ್ಕಾಗಮಿಸಿದ ಪೊಲೀಸರು ವಾಹನದಲ್ಲಿ ಸಿಲುಕಿದ್ದ ಶವಗಳನ್ನು ಹೊರತೆಗೆಯಲು ಹರಸಾಹಸಪಟ್ಟರು. ಅತಿ ವೇಗ ಹಾಗೂ ಚಾಲಕ ನಿದ್ರೆಗೆ ಜಾರಿದ್ದರಿಂದ ದುರ್ಘಟನೆ ಸಂಭವಿಸಿರಬಹುದು ಎಂದು ಶಂಕಿಸಲಾಗಿದೆ. ಘಟನೆ ಸಂಬಂಧ ಸ್ಥಳೀಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಪುಟ 2ಕ್ಕೆ

## ಕುಮಾರಸ್ವಾಮಿ ಸಿಎಂ ಇದ್ದಾಗ ಸ್ವಾಮೀಜಿ ಫೋನ್ ಕದ್ದಾಲಿಸಿದ್ದರು: ರಾಮಲಿಂಗಾರೆಡ್ಡಿ

**ರಾಮನಗರ:** ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಸ್ವಾಮೀಜಿ ಅವರ ಫೋನ್ ಕದ್ದಾಲಿಕೆ ಮಾಡಿರುವ ಆರೋಪ ಇತ್ತು. ಹಿಂದಿನ ರಾಜ್ಯ ಬಿಜೆಪಿ ಸರ್ಕಾರ ಮತ್ತು ಈಗಿನ ಕೇಂದ್ರ ಸರ್ಕಾರದ ವಿರುದ್ಧವೂ ಕದ್ದಾಲಿಕೆಯ ಆರೋಪವಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾ ರೆಡ್ಡಿ ಆರೋಪಿಸಿದರು.

ರಾಜ್ಯದ ಕಾಂಗ್ರೆಸ್ ಸರ್ಕಾರ ತನ್ನದೇ ಪಕ್ಷದ ಶಾಸಕರ ಫೋನ್ ಕರೆ ಕದ್ದಾಲಿಕೆ ಮಾಡುತ್ತಿದೆ ಎಂಬ ಕುಮಾರಸ್ವಾಮಿ ಆರೋಪಕ್ಕೆ ನಗರದಲ್ಲಿ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, ಮಾಧ್ಯಮದವರು ಮೈಕ್ ಹಿಡಿಯುತ್ತಿದ್ದಂತೆ ಶಾಸಕರೇ ಪುಟ 2ಕ್ಕೆ



## ಖಮೇನಿ ಪುತ್ರ ಮೊಜ್ತಬಾ ಇರಾನ್ ನಾಯಕ


### ಹೊಸ ನಾಯಕನನ್ನು ಆಯ್ಕೆ ಮಾಡಿದ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್

**ಟೆಹ್ರಾನ್:** ಇಸ್ರೇಲ್–ಅಮೆರಿಕದ ಪ್ರತೀಕಾರದ ದಾಳಿಯ ನಡುವೆ ಇರಾನ್ ಹೊಸ ನಾಯಕನನ್ನ ಆಯ್ಕೆ ಮಾಡಿದೆ. ಆಯತೊಲ್ಲಾ ಅಲಿ ಖಮೇನಿ ಪುತ್ರ ಮೊಜ್ತಬಾ ಖಮೇನಿ ಅವರನ್ನು ತಜ್ಞರ ಸಭೆಯು ಇರಾನ್‌ನ ಹೊಸ ಸರ್ವೋಚ್ಚ ನಾಯಕನನ್ನಾಗಿ ಆಯ್ಕೆ ಮಾಡಿದೆ ಎಂದು ಇರಾನ್‌ನ ಅಂತಾರಾಷ್ಟ್ರೀಯ ಸುದ್ದಿಸಂಸ್ಥೆ ವರದಿ ಮಾಡಿದೆ.

56 ವರ್ಷದ ಮೊಜ್ತಬಾ ಅವರನ್ನ ದೇಶದ ನಿಯಂತ್ರಣ ವಹಿಸಿಕೊಳ್ಳಲು ಆಯ್ಕೆ ಮಾಡಲಾಗಿದೆ. ದೀರ್ಘಕಾಲದ ನಾಯಕನಾಗಿ ಮುಂದುವರಿಯಲು ಎದುರು ನೋಡುತ್ತಿದ್ದಾರೆ. ಇದಕ್ಕೂ ಮುನ್ನ ಹಿರಿಯ ಧರ್ಮಗುರು ಅಯತೊಲ್ಲಾ ಅಲಿರೆಜಾ ಅರಾಫಿ ಅವರನ್ನು ಇರಾನ್‌ನ ಮಧ್ಯಂತರ ಸರ್ವೋಚ್ಚ ನಾಯಕರನ್ನಾಗಿ ಆಯ್ಕೆ ಮಾಡಲಾಗಿತ್ತು.

ಮೊಜ್ತಬಾ ಖಮೇನಿ (56) ಇಸ್ರೇಲ್ ದಾಳಿಯಲ್ಲಿ ಹತ್ಯೆಯಾದ ಆಯತೊಲ್ಲಾ ಅಲಿ ಖಮೇನಿ ಅವರ 2ನೇ ಪುತ್ರ. ದೇಶದ ಆಡಳಿತದ ಮೇಲೆ ಪ್ರಬಲ ಹಿಡಿತ ಹೊಂದಿದ್ದರು. ಆದರೆ ಬಹಳ ಹಿಂದಿನಿಂದಲೂ ಇಸ್ಲಾಮಿಕ್ ಗಣರಾಜ್ಯವು ವಂಶಪಾರಂಪರ್ಯ ಆಡಳಿತವನ್ನ ವಿರೋಧಿಸಿತ್ತು. ಅಲ್ಲದೇ ಮೊಜ್ತಬಾ ಥಿಯೋಲಾಜಿಕಲ್ ಶಾಸ್ತ್ರ ಓದಿಲ್ಲ ಅನ್ನೋ ಆರೋಪ ಕೂಡ ಕೇಳಿಬಂದಿತ್ತು. ಆದರೆ, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಮೊಜ್ತಬಾ ಅವರನ್ನ ಬೆಂಬಲಿಸಲು ಮತ್ತು ಅವರನ್ನೇ ಹೊಸ ನಾಯಕನ್ನಾಗಿ ಆಯ್ಕೆ ಮಾಡಲು ಸಭೆ ಸೇರಿದ್ದ ಧರ್ಮಗುರುಗಳ ಮೇಲೆ ಒತ್ತಡ ಹೇರಿತ್ತು ಆದ್ದರಿಂದ ಮೊಜ್ತಬಾ ನೂತನ ನಾಯಕನಾಗಿ ಆಯ್ಕೆಯಾಗಿದ್ದಾರೆ ಎನ್ನಲಾಗಿದೆ.

ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ ಪುಟ 2ಕ್ಕೆ



## ಮನೆಯಲ್ಲಿದ್ದ ಪೆಟ್ರೋಲ್‌ಗೆ ಬೆಂಕಿ: ಮಾಜಿ ಯೋಧ ಸಾವು

**ಮಡಿಕೇರಿ:** ಮನೆಯೊಳಗೆ ಸಂಗ್ರಹಿಸಿದ್ದ ಪೆಟ್ರೋಲ್‌ಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಮಾಜಿ ಸಿಆರ್‌ಪಿಎಫ್ ಯೋಧ ಸಾವಿಗೀಡಾದ ಘಟನೆ ತೋಳುರುಶೆಟ್ಟಳ್ಳಿ ಗ್ರಾಮದಲ್ಲಿ ನಡೆದಿದೆ. ಮೃತರನ್ನು ಎಚ್.ಎ.ವೆಂಕಟೇಶ್ (64) ಎಂದು ಗುರುತಿಸಲಾಗಿದೆ.

ತೋಟದ ಯಂತ್ರಗಳ ಬಳಕೆಗೆ ತಂದಿಟ್ಟಿದ್ದ ಪೆಟ್ರೋಲ್‌ಗೆ ಆಕಸ್ಮಿಕ ಬೆಂಕಿ ಹೊತ್ತಿಕೊಂಡಿದೆ. ಈ ವೇಳೆ ಬೆಂಕಿಯ ಕೆನ್ನಾಲಿಯಿಂದ ಹೊರ ಬರಲಾಗದೆ ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ.

ಮನೆಯಿಂದ ದಟ್ಟ ಹೊಗೆ ಕಾಣಿಸಿಕೊಂಡಿದ್ದರಿಂದ ಸ್ಥಳೀಯರು ಮನೆ ಬಳಿ ಪುಟ 2ಕ್ಕೆ






## ಇರಾನ್ ನಾಯಕನನ್ನು ಹೊಡೆದು ಹಾಕುತ್ತೇವೆ: ಇಸ್ರೇಲ್ ಬೆದರಿಕೆ

**ದುಬೈ:** ಇರಾನ್ ತನ್ನ ಮುಂದಿನ ಸರ್ವೋಚ್ಚ ನಾಯಕನನ್ನಾಗಿ ಯಾರನ್ನೇ ಆಯ್ಕೆ ಮಾಡಿದರೂ ಅವರನ್ನು ನಾವು ನಿರ್ಮೂಲನೆ ಮಾಡುತ್ತೇವೆ ಎಂದು ಬುಧವಾರ ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಜ್ ಬೆದರಿಕೆ ಹಾಕಿದ್ದಾರೆ.

ಇಸ್ರೇಲ್ ಮಾಧ್ಯಮಗಳಿಗೆ ಹೇಳಿಕೆ ನೀಡಿರುವ ಅವರು, ಇಸ್ರೇಲ್ ಅನ್ನು ನಾಶಮಾಡಲು ಪ್ರಯತ್ನಿಸುವ, ಅಮೆರಿಕ ಮತ್ತು ಇತರ ದೇಶಗಳಿಗೆ ಬೆದರಿಕೆ ಒಡ್ಡುವ ಅಥವಾ ಇರಾನಿನ ಜನರನ್ನು ದಮನಿಸುವ ಕಾರ್ಯವನ್ನು ಮುಂದುವರಿಸುವ ಇರಾನ್‌ನ ಭಯೋತ್ಪಾದಕ ಸರ್ಕಾರವು ಯಾರನ್ನೇ ತನ್ನ ಮುಂದಿನ ಸರ್ವೋಚ್ಚ ನಾಯಕನನ್ನಾಗಿ ನೇಮಿಸಿದರೂ ಅವರು ಬದುಕುಳಿಯುವುದಿಲ್ಲ ಎಂದು ಎಚ್ಚರಿಕೆ ನೀಡಿದ್ದಾರೆ.

ಅವನ ಹೆಸರು ಏನೇ ಇರಲಿ ಅಥವಾ ಅವನು ಎಲ್ಲಿಯೇ ಅಡಗಿರಲಿ, ಅವನನ್ನು ಹೊಡೆದು ಉರುಳಿಸುತ್ತೇವೆ. ಲಯನ್ಸ್ ರೋರ್ ಎಂಬ ಮಿಲಿಟರಿ ಕಾರ್ಯಾಚರಣೆಯ ಭಾಗವಾಗಿ ಯಾವುದೇ ಅಗತ್ಯ ವಿಧಾನಗಳನ್ನು ಬಳಸಿಕೊಂಡು ಕ್ರಮ ಕೈಗೊಳ್ಳಲು ಎಲ್ಲ ರೀತಿಯಿಂದಲೂ ಸಿದ್ಧತೆ ಮತ್ತು



ಕಾರ್ಯನಿರ್ವಹಿಸುವಂತೆ ಪ್ರಧಾನ ಮಂತ್ರಿ ಮತ್ತು ನಾನು ಐಡಿಎಫ್‌ಗೆ (ಇಸ್ರೇಲ್ ರಕ್ಷಣಾ ಪಡೆಗಳು) ಸೂಚನೆ ನೀಡಿದ್ದೇವೆ ಎಂದಿದ್ದಾರೆ.

ಇರಾನ್ ಸರ್ಕಾರದ ಮಿಲಿಟರಿ ಮತ್ತು ಕಾರ್ಯತಂತ್ರದ ಸಾಮರ್ಥ್ಯಗಳನ್ನು ದುರ್ಬಲಗೊಳಿಸುವುದು ಅಥವಾ ನಾಶಮಾಡಲು, ಇರಾನಿನ ಜನರು ತಮ್ಮ ಸದ್ಯದ ಸರ್ಕಾರವನ್ನು ಉರುಳಿಸಲು ಮತ್ತು ಅದನ್ನು ಬದಲಾಯಿಸಲು ಅನುವು ಮಾಡಿಕೊಡುವ ಪರಿಸ್ಥಿತಿಗಳನ್ನು


ಸೃಷ್ಟಿಸಲು ನಾವು ಅಮೆರಿಕನ್ ಪಾಲುದಾರರೊಂದಿಗೆ ಪೂರ್ಣ ಬಲದಿಂದ ಕಾರ್ಯನಿರ್ವಹಿಸುತ್ತೇವೆ ಎಂದು ತಿಳಿಸಿದ್ದಾರೆ.

# ಪುಟ್ಟರಂಗಶೆಟ್ಟಿ ವಿರುದ್ಧ ನಿಜಗುಣರಾಜು ಆರೋಪದಲ್ಲಿ ಹುರುಳಿಲ್ಲ

ಚಾಮರಾಜನಗರ, ಶಾಸಕ ಸಿ.ಪುಟ್ಟರಂಗಶೆಟ್ಟಿ ಅವರು ಸರ್ಕಾರದ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂಬ ಬಿಜೆಪಿ ಮುಖಂಡ ನಿಜ ಗುಣರಾಜು ಆರೋಪ ಮಾಡಿರುವ ಆರೋಪದಲ್ಲಿ ಯಾವುದೇ ಹುರಳಿಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ.ರವಿಕುಮಾರ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನಿಜಗುಣರಾಜು ಅವರಿಗೆ ಟೀಕೆ ಮಾಡುವುದು ಒಂದು ಚಾಳಿಯಾಗಿದೆ. ಅವರ ಇದೇ ರೀತಿ ಇಲ್ಲ ಸಲ್ಲದ ಆರೋಪಗಳನ್ನು ಮಾಡು ವುದನ್ನು ಮುಂದುವರಿಸಿದರೆ ಅವರ ಲೋಪ ದೋಷಗಳನ್ನು ಬಹಿರಂಗಪಡಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಿಎಂ ಸಿದ್ದರಾಮಯ್ಯ ಅವರು ನೀಡಿರುವ 50 ಕೋಟಿ ಅನುದಾನವನ್ನು ಯಾವ ಯಾವ ಇಲಾಖೆಗೆ ಹಂಚಿಕೆಯ ಮಾಡಬೇಕು ಎಂಬುದನ್ನು ಸರ್ಕಾರ ಮಾನದಂಡ ಹಾಕಿಕೊಟ್ಟಿದೆ. 50 ಕೋಟಿಯಲ್ಲಿ 5-6 ಕೋಟಿ ಬಿಟ್ಟರೆ ಉಳಿದ ಹಣ ಬಂದಿಲ್ಲ. ಇದರ ಬಗ್ಗೆ ಮಾಹಿತಿ ಇಲ್ಲದೇ ನಿಜಗುಣರಾಜು ಆರೋಪ ಮಾಡುತ್ತಿದ್ದಾರೆ ಎಂದರು.




ವೀರನಪುರ ಬಳಿ 1.30 ಕೋಟಿ ವೆಚ್ಚದಲ್ಲಿ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಇಲ್ಲಿ ನಿರ್ಗತಿಕರ ಪುನರ್ವಸತಿ ಕೇಂದ್ರಕ್ಕೆ ಹೋಗುವ ರಸ್ತೆಯಾಗಿರುವುದರಿಂದ ಅಭಿವೃದ್ಧಿಪಡಿಸಲಾಗುತ್ತಿದೆ. 5 ಎಕರೆ ಸರ್ಕಾರಿ ಜಮೀನು ಕಬಳಿಸುವ ಹುನ್ನಾರ ಎಂದು ಹೇಳುವ ನಿಜಗುಣರಾಜು ಅವರು ಈ ಬಗ್ಗೆ ಆಧಾರಗಳಿದ್ದರೆ ಕೊಡಲಿ ಎಂದು ಸವಾಲು ಹಾಕಿದರು.

ಮಾಲಂಗಿಯಿಂದ ಚಾ.ನಗರಕ್ಕೆ ಕಾವೇರಿ ನೀರು ತರುವ ಯೋಜನೆಗೆ 157 ಕೋಟಿ ವೆಚ್ಚದ ಯೋಜನೆಗೆ ಸರ್ಕಾರ ಅನುಮೋದನೆ ನೀಡಿದೆ. ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಕೆಲಸ ಮಾಡಿರುವುದರಿಂದಲೇ 4 ಬಾರಿ ಶಾಸಕರನ್ನಾಗಿ ಜನರು ಆಯ್ಕೆ ಮಾಡಿದ್ದಾರೆ ಎಂದರು. ಪುಟ್ಟರಂಗಶೆಟ್ಟರು ಶಾಸಕರಾಗುವ ಮುಂಚಿನಿಂದಲೂ ಕರಿಕಲ್ಲು ಉದ್ಯಮಿಯಾಗಿದ್ದಾರೆ. ಅಲ್ಲದೇ ವ್ಯವಸಾಯ ಕೂಡ ಮಾಡುತ್ತಿದ್ದು ಅದರಲ್ಲಿ ಬಂದ ಆದಾಯದಲ್ಲಿ ಆಸ್ತಿ ಖರೀದಿಸಿದ್ದು ಎಲ್ಲವೂ ಕಾನೂನುಬದ್ಧವಾಗಿದೆ. ಬಿಜೆಪಿ ಅವಧಿಯಲ್ಲಿ ಚಾ.ನಗರ ಜಿಲ್ಲೆಗೆ ಯಾವುದೇ ಅನುದಾನ ಕೊಡುತ್ತಿರಲಿಲ್ಲ. ಆದರೆ, ಸಿದ್ದರಾಮಯ್ಯ ಅವರು ಪ್ರತಿ ಬಜೆಟ್‌ನಲ್ಲಿಯೂ ಒಂದಿಲ್ಲೊಂದು ಅನುದಾನ ನೀಡುತ್ತಿದ್ದಾರೆ ಎಂದು ಹೇಳಿದರು.

ನಗರದ ನ್ಯಾಯಾಲಯದ ರಸ್ತೆ ನಿರ್ಮಾಣ ವಿಳಂಬಕ್ಕೆ ನಿಜಗುಣರಾಜು ಅವರೇ ಕಾರಣರಾಗಿದ್ದು ಜನರ ಬಗ್ಗೆ ಅವರಿಗೆ ಕಾಳಜಿ ಇದ್ದರೆ ರಸ್ತೆಗೆ ಜಾಗ ಬಿಟ್ಟು ಕೊಡದೇ ಕೋರ್ಟ್‌ನಲ್ಲಿ ತಡೆಯಾಜ್ಞೆ ಯಾಕೆ ತಂದರು ಎಂದು ಪ್ರಶ್ನಿಸಿದರು. ಅವರ ಹೆಸರು ನಿಜ ಗುಣರಾಜು ಅಂತಾ ಇದೆ. ಅದಕ್ಕೆ ತದ್ವಿರುದ್ಧವಾಗಿ ಸುಳ್ಳನ್ನೇ ಹೇಳುವ ಮೂಲಕ ಸುಳ್ಳುಗುಣ ಎಂದು ಖ್ಯಾತಿಯಾಗಿದ್ದಾರೆ ಎಂದು ಟೀಕಿಸಿದರು. ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್, ತಾಲೂಕು ಗ್ಯಾರಂಟಿ ಯೋಜನೆ ಅಧ್ಯಕ್ಷ ಸೋಮೇಶ್ವರ್ ಮಾತನಾಡಿದರು. ಪತ್ರಿಕಾಗೋಷ್ಠಿಯಲ್ಲಿ ಕನಿಷ್ಠ ವೇತನಾ ಸಲಹಾ ಸಮಿತಿಯ ಮಾಜಿ ಅಧ್ಯಕ್ಷ ಉಮೇಶ್ ಎಸ್ ಪಿಕೆ, ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಎಂ.ಶಿವಮೂರ್ತಿ, ನಗರಸಭಾ ಮಾಜಿ ಸದಸ್ಯರಾದಚೆಂಗುಮಣಿ, ಕರಿನಂಜನಪುರ ಸ್ವಾಮಿ, ಪುಟ್ಟಸ್ವಾಮಿ ಹಾಜರಿದ್ದರು.

## ಕೃಷ್ಣ ವಂದನ



ಸ್ನೇಹಾ ಆನಂದ್



### ಹೇ ಕೃಷ್ಣಾ !

ಏನು ಮಾಡಲಿ ಹೇಳು ರಂಗಯ್ಯನೇ,
ಯಾಕೆ ಮೂಕನಾದೆ ಲೋಕಪಾಲಕನೇ!
ಸಾಸಿರ ನಾಮವು ನಿನ್ನದೆ ಎಂದರೆ,
ಆಡಿದ ಮಾತೆಲ್ಲ ನಿನ್ನ ನಾಮವೆ ಸರಿಯೆ!

ಜಪವ ಮಾಡಿದರೇನು, ತಪವಗೈದರೇನು,
ಪುಣ್ಯವ ಗಳಿಸದೆ ಹೋದರೆ ಫಲವೇನು!
ಗಂಧ ಪೂಸಿದರೇನು, ನೈವೇದ್ಯವಿಟ್ಟರೇನು,
ಪೂಜೆ ಫಲಿಸದೆ ಹೋದರೆ ಫಲವೇನು!

ಗುಡಿ ಗುಂಡಾರವ ಸುತ್ತಿದರೇನು,
ಪ್ರದಕ್ಷಿಣೆ, ದಕ್ಷಿಣೆ ಹಾಕಿದರೇನು !
ಪರಿಪಾಲಕ ನಿನ್ನ ಕರುಣೆಯ ಭಿಕ್ಷೆ,
ಇಲ್ಲದೆ ನಾ ಇರುವೆನೇನು!

ಪನ್ನಗ ಶಯನನೇ, ಪಂಢರಿನಾಥನೆ,
ಬೆಟ್ಟದ ಮೇಲೆ ನಿಂತು ನಗುವ ವೆಂಕಟೇಶನೆ!
ಹಿಮ ಪರ್ವತಗಳ ಎತ್ತಿ ನಿಂತ ಹೇಮಗಿರೀಶನೆ,
ಧರೆಯ ಉದ್ಧಾರಕ ಭಕ್ತರ ಒಡೆಯನೆ!!

## ಒಳ ಮೀಸಲಾತಿ ಜಾರಿಯ ವಿಚಾರದಲ್ಲಿ ತಕರಾರಿಲ್ಲ

ಚಾಮರಾಜನಗರ: ಒಳ ಮೀಸಲಾತಿ ಜಾರಿಯ ವಿಚಾರದಲ್ಲಿ ನಮ್ಮದೇನು ತಕರಾರಿಲ್ಲ ಅದರೆ ವಿನಾ ಕಾರಣ ಮಾದಿಗ ಸಮುದಾಯದ ನಾಯಕರುಗಳಾದ ಭಾಸ್ಕರ್ ಪ್ರಸಾದ್ ಮತ್ತು ಅರುಣ್ ಕುಮಾರ್ ರವರು ನಿರಂತರವಾಗಿ ನಮ್ಮ ಬಲಗೈ



ಸಮುದಾಯದ ನಾಯಕರುಗಳಾದ ಡಾ.ಜಿ.ಪರಮೇಶ್ವರ್, ಡಾ. ಎಚ್ ಸಿ ಮಹದೇವಪ್ಪ ಮತ್ತು ಪ್ರಿಯಾಂಕ ಖರ್ಗೆ ಇವರುಗಳನ್ನು ಸಾಮಾಜಿಕ ಜಾಲತಾಣದಲ್ಲಿ ಏಕ ವಚನದಲ್ಲಿ ಬಾಯಿಗೆ ಬಂದಂತೆ ಮಾತಾನಾಡುತ್ತಿರುವುದು ಖಂಡನೀಯವಾಗಿದೆ ಎಂದು ಕಾಂಗ್ರೆಸ್ ಮುಖಂಡರಾದ ಚಿರಕನಹಳ್ಳಿ ಶ್ರೀನಿವಾಸರವರು ಹೇಳಿದ್ದಾರೆ. ತಮ್ಮ ಪತ್ರಿಕಾ ಹೇಳಿಕೆಯಲ್ಲಿ ಅವರು ಬಲಗೈ ಸಮುದಾಯದವರನ್ನು ಇದುವರೆವಿಗೆ ಇವರುಗಳು ಎಷ್ಟೇ ನಿಂದಿಸಿದ್ದರೂ ಸಹ ಒಂದೆ ಒಂದು ವಾಕ್ಯವನ್ನು ಸಹ ಎಡಗೈ ಸಮುದಾಯದ ವಿರುದ್ಧ ಮಾತನಾಡಿರುವುದಿಲ್ಲ ಹೀಗೆ ಇರುವಾಗ ನಮ್ಮ ಸಮುದಾಯದ ರಾಜಕೀಯ ಮುಖಂಡರನ್ನು ನೇರವಾಗಿ ಟಾರ್ಗೆಟ್ ಮಾಡಿ ನಿಂದಿಸುತ್ತಿರುವುದು ತುಂಬಾ ದುಖಕರವಾದ ಸಂಗತಿಯಾಗಿದೆ. ನಾವು ಎರಡು ಸಮುದಾಯ ಗಳನ್ನು ಒಂದು ಗೂಡಿಸಬೇಕು ಎಂದು ನಮ್ಮ ಬಯಕೆಯಾಗಿದೆ ಆದರೆ ಇವರು ರಾಜಕೀಯ ಪ್ರೇರಿತವಾಗಿ ನಿರಂತರ ವಾಗಿ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಅಪಪ್ರಚಾರ ಮಾಡುತ್ತಾ ಅವರ ತೇಜೋವಧೆ ಕಾರಣರಾಗುತ್ತಿದ್ದಾರೆ.

ಇದು ಸರಿಯಾದ ಬೆಳವಣಿಗೆಯಾಗದೆ ದಲಿತರ ಒಗ್ಗಟ್ಟನ್ನು ಮುರಿಯುವ ಕೆಲಸವಾಗಿದೆ.

ಅವರುಗಳು ಇದೆ ರೀತಿ ಮುಂದುವರಿದರೆ ನಾವು ಸಹ ಇವರುಗಳ ವಿರುದ್ಧ ಕಠಿಣ ಪದಗಳನ್ನು ಬಳಸಿ ಅವರನ್ನು ತೇಜೋವಧೆ ಮಾಡುವ ಶಕ್ತಿ ನಮಗೂ ಇದೆ ಅದ್ದರಿಂದ ಇನ್ನಾದರೂ ಹೀಗೆ ಅನವಶ್ಯಕವಾಗಿ ಮಾತನಾಡಿ ದಲಿತರ ಮಧ್ಯ ಬಿರುಕು ಮೂಡಿಸುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಅವರಿಗೆ ತಕ್ಕ ಪಾಠ ಕಲಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

# ನಾಳೆ ವಿಕಲಚೇತನರ ಕಾರ್ಯಾಗಾರ

## ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಮಾಹಿತಿ




ಮೈಸೂರು: ಮಹಾನಗರ ಪಾಲಿಕೆವತಿಯಿಂದ ಮಹಿಳೆಯರು ಹಾಗೂ ವಿಕಲಚೇತನರಿಗೆ ಉದ್ಯೋಗ ಕಲ್ಪಿಸಿ ಆರ್ಥಿಕ ಮಟ್ಟ ಸುಧಾರಿಸಲು ಮಾ.6ರಂದು ಬೆಳಿಗ್ಗೆ 9.30ಗಂಟೆಗೆ ಶ್ರೀ ರಂಗಚಾರ್ಲು ಪುರಭವನದಲ್ಲಿ ವಿಕಾಸ ಪಥದಲ್ಲಿ ವಿಶೇಷಚೇತನರ ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರ ಹಾಗೂ ಜೀವನೋಪಯ ಪರಿಹಾರ ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ ಎಂದು ಮೈಸೂರು ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ತಿಳಿಸಿದರು.

ಮಹಾನಗರ ಪಾಲಿಕೆಯ ಕಚೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ವಚ್ಛ ಮೈಸೂರು ರೋಡ್ ಶೋ ಹಾಗೂ ವಿಶೇಷಚೇತನರ ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರದ ಪೋಸ್ಟರ್ ಬಿಡುಗಡೆ ಮಾಡಿ ಮಾತನಾಡಿದರು. ವಿಶೇಷಚೇತನರಿಗಾಗಿ ಮೈಸೂರು ಮಹಾನಗರಪಾಲಿಕೆಯಲ್ಲಿ ಶೇ 5 ರಷ್ಟು ಅನುದಾನ ಮೀಸಲಿದ್ದು, ಅದರಲ್ಲಿ ಅವರಿಗೆ ಜೀವನೋಪಾಯ ಕಲ್ಪಿಸುವ ರೀತಿಯಲ್ಲಿ ತರಬೇತಿ ನೀಡಬೇಕು. ಮಾ.6ರಂದು ಸೆಲ್ಕೋ ಫೌಂಡೇಶನ್ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗುತ್ತಿದ್ದು, ಕಾರ್ಯಾಗಾರದಲ್ಲಿ ಸೋಲರ್ ಆಧಾರಿತ ವ್ಯವಸಾಯ ಯಂತ್ರಗಳು, ಪಶುಸಂಗೋಪನಾ ಯಂತ್ರಗಳು, ಕಿರು ಉದ್ಯಮ ಯಂತ್ರ ಹಾಗೂ ಉತ್ಪನ್ನ ಯಂತ್ರಗಳನ್ನು ಬಳಸಿ ಸ್ವ ಉದ್ಯೋಗಿಗಳಾಗಿ ಕೆಲಸ ನಿರ್ವಹಿಸಲು ಬೇಕಿರುವ ಕೌಶಲ್ಯ ತರಬೇತಿ ನೀಡಲಾಗುವುದು ಎಂದರು.

ತರಬೇತಿ ನೀಡಿದ ನಂತರ ಅವರಿಗೆ ಸ್ವ ಉದ್ಯೋಗ ಕೈಗೊಳ್ಳಲು ಬೇಕಿರುವ ಬ್ಯಾಂಕಿನಿಂದ ಬೇಕಿರುವ ಸಾಲ ಹಾಗೂ ಸಹಾಯಧನ ಒದಗಿಸಿ. ನಂತರ ಅವರು ಜೀವನದಲ್ಲಿ ಆರ್ಥಿಕವಾಗಿ ಸದೃಢವಾಗಿರುವ ಬಗ್ಗೆ ನಿಗಾ ವಹಿಸಿ ಇತರರಿಗೆ ತಿಳಿಸಿ., ಇದರಿಂದ ಮಹಿಳೆಯರು ಹಾಗೂ ವಿಕಲ ಚೇತನರು ಹೆಚ್ಚಾಗಿ ಕೌಶಲ್ಯಾಧರಿತ ತರಬೇತಿ ಪಡೆಯಲು ಮುಂದಾಗಲಿ. ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಮಾ.8ರಂದು ಮೈಸೂರು ಅರಮನೆ ಆವರಣದಿಂದ ಓವಲ್ ಮೈದಾನದವರೆಗೆ ಸ್ವಚ್ಛ ಮೈಸೂರು ನನ್ನಿಂದ ಪ್ರಾರಂಭ ಎಂಬ ಧ್ಯೇಯ ವಾಕ್ಯದೊಂದಿಗೆ ಸ್ವಚ್ಛತಾ ರೋಡ್ ಶೋ ಆಯೋಜಿಸಲಾಗಿದೆ. ಕಾರ್ಯಕ್ರಮಕ್ಕೆ ಚಾಲನೆ ನೀಡಲು ಮುಖ್ಯಮಂತ್ರಿಗಳನ್ನು ಸಹ ಆಹ್ವಾನಿಸಲಾಗುವುದು. ಪರಿಸರದ ಬಗ್ಗೆ ಹೆಚ್ಚಿನ ಕಾಳಜಿ ಹೊಂದಿರುವ ಸಂಘ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕಾರ್ಯಕ್ರಮವನ್ನು ಆಯೋಜಿಸಿ ಎಂದು ಹೇಳಿದರು. ಸಭೆಯಲ್ಲಿ ಮಹಾನಗರ ಪಾಲಿಕೆ ಉಪಾಯುಕ್ತೆ ವೀಣಾ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಮಂಡಳಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಕ್ಲೀನ್ ಫೌಂಡೇಶನ್ ಮೈಸೂರ್ ನ ನಿರ್ದೇಶಕ ಲೀಲಾ ವೆಂಕಟೇಶ್, ಸೆಲ್ಕೋ ಫೌಂಡೇಶನ ಪ್ರಕಾಶ್ ಮೇಟಿ, ಪರಿಸರ ವಿಜ್ಞಾನ ಸಂಶೋಧಕ ಹೆಚ್.ಗೋಪಿ ಕಿರಣ್, ಜಿ.ಎಸ್.ಎಸ್ ಪ್ರಾಜೆಕ್ಟ್ ಕ್ರೆಡೈ ನ ಶ್ರೀ ಡಿ.ರಾಮ್, ಶ್ರೀಧರ್, ಶ್ರೀಹರಿ ಮತ್ತಿತರರು ಉಪಸ್ಥಿತರಿದ್ದರು.

### ಸ್ವಚ್ಛ ಮೈಸೂರು ನಿರ್ಮಾಣದ ಬಗ್ಗೆ ಜಾಗೃತಿ

**ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ ರೋಡ್ ಶೋನಲ್ಲಿ ವಿಟೇಂಜ್ ಕಾರ್, ಮಹಿಳಾ ದಿನಾಚರಣೆ ಮಾ.8 ರಂದು ಇರುವ ಹಿನ್ನಲೆಯಲ್ಲಿ ಮಹಿಳೆಯರ ಬೈಕ್ ರ್ಯಾಲಿ, ಸೈಕಲ್ ರ್ಯಾಲಿ, ಮೌಂಟೆಡ್ ತಂಡದಿಂದ ಕುದುರೆಗಳು, ಟಾಂಗಾಗಳು ಇನ್ನಿತರೆ ತಂಡಗಳು ಭಾಗವಹಿಸುವ ರೀತಿ ಯೋಜಿಸಲಾಗುತ್ತಿದೆ. ರೋಡ್ ಶೋ ಕೊನೆಗೊಳ್ಳುವ ಓವಲ್ ಮೈದಾನದಲ್ಲಿ ಕಟ್ಟಡ ನಿರ್ಮಾಣ ತ್ಯಜ್ಯ ವಸ್ತುಗಳಿಂದ ಉಪಯುಕ್ತ ವಸ್ತುಗಳ ತಯಾರಿಕೆ, ಇ.ವೇಸ್ಟ್ , ಪ್ಲಾಸ್ಟಿಕ್, ಬಯೋ ಮೆಡಿಕಲ್ ವೇಸ್ಟ್ ಗಳ ನಿರ್ವಹಣೆ ಕುರಿತು ಪ್ರಾತ್ಯಕ್ಷಿಕೆ ಆಯೋಜಿಸಿ ಸಾರ್ವಜನಿಕರಿಗೆ ಸ್ವಚ್ಛ ಮೈಸೂರು ನಿರ್ಮಾಣದ ಬಗ್ಗೆ ಜಾಗೃತಿ ಮೂಡಿಸಲಾಗುವುದು ಎಂದರು.**

## ಬಜೆಟ್‌ನಲ್ಲಿ ಇಂಜಿನಿಯರಿಂಗ್ ಕಾಲೇಜು ಘೋಷಣೆಗೆ ಆಗ್ರಹ

ಮೈಸೂರು: ರಾಜ್ಯದಲ್ಲಿ ಎರಡನೇ ದೊಡ್ಡ ಪ್ರಮುಖ ನಗರವಾಗಿರುವ ಮೈಸೂರಿನಲ್ಲಿ ಒಂದೇ ಒಂದು ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಇಲ್ಲದಿರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಸರ್ಕಾರ ಈ ಬಜೆಟ್‌ನಲ್ಲಿ ಈ ಬಗ್ಗೆ ಗಮನ ಹರಿಸಬೇಕೆಂದು ಅಹಿಂದ ಸಮನ್ವಯ ಸಮಿತಿ ಜಂಟಿ ಕಾರ್ಯದರ್ಶಿ ಎಂ. ವಿಷಕಂಠ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ನಗರದಲ್ಲಿ ಈ ಕಾಲೇಜು ಸ್ಥಾಪನೆಗೆ ಸಾಕಷ್ಟು ಸ್ಥಳಗಳಿವೆ. ಹೀಗಾಗಿ ಕಾಲೇಜಿಗೆ ವಿದ್ಯಾರ್ಥಿಗಳು ಬಂದು ಹೋಗುವುದಕ್ಕೆ ಸೂಕ್ತವಾದ ಜಾಗ ಆಯ್ಕೆ ಮಾಡಿ ಸ್ಥಾಪಿಸಿದಲ್ಲಿ ಮೈಸೂರು ಜನತೆ, ಅದರಲ್ಲಿಯೂ ವಿದ್ಯಾರ್ಥಿ ಸಮುದಾಯಕ್ಕೆ ಅನುಕೂಲವಾಗುತ್ತದೆ ಎಂದು ಸಲಹೆ ನೀಡಿದರು.

ನಗರದಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಇಲ್ಲದಿರುವುದರಿಂದಾಗಿ ಜಿಲ್ಲೆಯ ಹಿಂದುಳಿದ ಸಮುದಾಯದ ಪರಿಶಿಷ್ಟ ಜಾತಿ, ಪಂಗಡದ ವಿದ್ಯಾರ್ಥಿಗಳಿಗೆ ಈ ಶಿಕ್ಷಣ ಪಡೆಯುವುದು ಕಷ್ಟವಾಗಿದೆ. ಬುದ್ಧಿವಂತ ಮಕ್ಕಳು ಸಹಾ ಖಾಸಗಿ ಶಿಕ್ಷಣ ಸಂಸ್ಥೆಗಳ ದುಬಾರಿ ಶುಲ್ಕ ಕಟ್ಟಲಾಗದೇ ಈ ಶಿಕ್ಷಣ ಪಡೆಯಲು ಸಾಧ್ಯವಾಗದಂತಾಗಿದೆ. ಆದ್ದರಿಂದ ಸರ್ಕಾರ ಕೂಡಲೇ ಗಮನ ಹರಿಸಿ, ಇಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸಬೇಕೆಂದು ಕೋರಿದರು. ಸಿ. ಹರಕುಮಾರ್, ಸೋಮಯ್ಯ ಮಲೆಯೂರು, ಬಿ. ಬೋರಯ್ಯ ಇದ್ದರು.

## ಸ್ಥೂಲಕಾಯ ಅರಿವು

ಮೈಸೂರು: ಸ್ಥೂಲ ಕಾಯದಿಂದ ಅನೇಕ ಅನಾರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಹೀಗಾಗಿ ಇದನ್ನು ತಡೆಗಟ್ಟುವ ನಿಟ್ಟಿನಲಿ ತಮ್ಮ ಭಾನವಿ ಆಸ್ಪತ್ರೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಜೊತೆಗೆ ವ್ಯಕ್ತಿಗತ ವೈದ್ಯಕೀಯ ತಪಾಸಣಾ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ವೈದ್ಯಕೀಯ ಅಧೀಕ್ಷಕ ಡಾ.ಎಚ್.ಎನ್.ಚಂದನ್ ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮಧುಮೇಹ, ಹೃದಯ ರೋಗ, ಅಸಮರ್ಪಕ ಆಹಾರ ಪದ್ಧತಿ, ಹೆಚ್ಚು ಸಮಯ ಕುಳಿತೇ ಕೆಲಸ ಮಾಡುವುದು, ರಕ್ತದೊತ್ತಡ, ಕೊಬ್ಬಿನ ಯಕೃತ್, ವ್ಯಾಯಾಮದ ಕೊರತೆ, ಸಂಧಿವಾತ, ಸಂಧಿನೋವು, ಉಸಿರಾಟದ ತೊಂದರೆ, ಒತ್ತಡದ ಜೀವನ ಶೈಲಿಗಳಿಂದಾಗಿ ಇದು ಕಾಣಿಸಿಕೊಳ್ಳಬಹುದಾಗಿದೆ. ಹೀಗಾಗಿ ಸೂಕ್ತ ಸಮಯದಲ್ಲಿ ತಪಾಸಣೆಗೆ ಒಳಗಾಗಿ ಚಿಕಿತ್ಸೆ ಪಡೆಯುವುದು ಅಗತ್ಯ ಎಂದು ಸಲಹೆ ನೀಡಿದರು.

ನರ್ಸಿಂಗ್ ಅಧೀಕ್ಷಕ ಕೆ.ಎಸ್. ನಿರಂಜನ್ ಸ್ವಾಮಿ ಹಾಜರಿದ್ದರು.

# ಯೋಗಿನಾರೇಯಣ ಯತೀಂದ್ರ ಸಿದ್ಧಾಂತ ಅಳವಡಿಸಿಕೊಳ್ಳಿ

ಚಾಮರಾಜನಗರ: ಜನರಿಗೆ ಮುಕ್ತಿಮಾರ್ಗ ತೋರಿದ ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರ ಆದರ್ಶ ತತ್ವಸಿದ್ಧಾಂತಗಳನ್ನು ಅಳವಡಿಸಿಕೊಳ್ಳುವಂತೆ ಚಾಮರಾಜನಗರ ಮತ್ತು ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನ) ತಿಳಿಸಿದರು.

ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗ ಮಂದಿರದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರ 300ನೇ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕೋಲಾರ ಜಿಲ್ಲೆಯ ಕೈವಾರ ಗ್ರಾಮದ ಸಾಮಾನ್ಯ ಬಡಕುಟುಂಬದಲ್ಲಿ ಜನಿಸಿದ ಶ್ರೀ ಯೋಗಿನಾರೇಯಣ ಯತೀಂದ್ರ ಅವರು ಕೈವಾರ ತಾತಯ್ಯನಾಗಿ ಬೆಳೆದ ಹಾದಿ ಬಹಳ ಸಂಕಷ್ಟದಿಂದ ಕೂಡಿತ್ತು. ವೃತ್ತಿಯಲ್ಲಿ ಬಳೆ ವ್ಯಾಪಾರ ಮಾಡುತ್ತಿದ್ದ ಕೈವಾರ ತಾತಯ್ಯ ಮಹಿಳೆಯರಿಗೆ ಬಳೆ ತೊಡಿಸಿ ಅವರಲ್ಲಿಯೇ ದೇವರನ್ನು ಕಾಣುತ್ತಿದ್ದರು. ಹಣ ನೀಡಿದರೆ ಪಡೆಯುತ್ತಿದ್ದರು, ಇಲ್ಲದಿದ್ದರೇ ಹಣ ಕೇಳದ ನಿಸ್ವಾರ್ಥ ವ್ಯಕ್ತಿತ್ವ ಅವರದಾಗಿತ್ತು. ಇಂದು ತೀವ್ರ ವ್ಯಾಪಾರೀಕರಣದಲ್ಲಿ ಮುಳುಗಿರುವ ಜನತೆ ಕೈವಾರ ತಾತಯ್ಯ ಅವರ ಆದರ್ಶ



ಸದ್ಗುಣಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ಮಾತನಾಡಿ 17-18ನೇ ಶತಮಾನದಲ್ಲಿ ಜೀವಿಸಿದ್ದ ಕೈವಾರ ತಾತಯ್ಯ ಅವರು ಕಾಲಜ್ಞಾನಿಯೂ, ಪವಾಡಪುರುಷರು ಆಗಿದ್ದರು. ಮೂಢನಂಬಿಕೆಗಳ ವಿರುದ್ಧ ಹೋರಾಡಿ ಜನಜಾಗೃತಿ ಮೂಡಿಸಿದರು. ಅಂಧಕಾರದಲ್ಲಿ ಮುಳಗಿದ್ದ ಅಂದಿನ ಜನರನ್ನು ಆಧ್ಯಾತ್ಮಿಕವಾಗಿ ಮುನ್ನೆಡೆಸಿ ಸಮಾಜ ಸುಧಾರಣೆಗೆ ನಾಂದಿ ಹಾಡಿದ್ದಾರೆ. ಅವರ ವ್ಯಕ್ತಿತ್ವ, ಜೀವನ ಸಾಧನೆ ನಮಗೆ ದಾರಿ ದೀಪವಾಗಿದೆ. ಕೈವಾರ ತಾತಯ್ಯ ಅವರ ವಿಚಾರಧಾರೆಗಳು, ಕಾಲಜ್ಞಾನದ ಮಹತ್ವ ಇಂದಿಗೂ ಪ್ರಸ್ತುತವಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣ ಮಾಡಿದ ದಾಸ ಬಣಜಿಗಶೆಟ್ಟರ ಸಂಘದ ಗೌರವಾಧ್ಯಕ್ಷ ಸಿ.ವಿ. ಶ್ರೀನಿವಾಸ ಶೆಟ್ಟಿ ಶ್ರೀ ಯೋಗಿನಾರೇಯಣ ಯತೀಂದ್ರ ಜಯಂತಿಯನ್ನು ಪ್ರತಿವರ್ಷ ಸರ್ಕಾರದ ವತಿಯಿಂದ ಆಚರಿಸಿ ಕೈವಾರ ತಾತಯ್ಯ ಅವರ ಕಾಲಜ್ಞಾನದ ಸಂದೇಶವನ್ನು ಇಡೀ ವಿಶ್ವಕ್ಕೆ ಪರಿಚಯಿಸಲಾಗುತ್ತಿದೆ. ತಾತಯ್ಯ ಅವರ ಯೋಗಶಕ್ತಿ ಧ್ಯಾನಶಕ್ತಿ ಅಪರಿಮಿತವಾಗಿದೆ. ತಾತಯ್ಯ ಅವರ ತತ್ವಸಿದ್ಧಾಂತಗಳನ್ನು ಜಗತ್ತು ಪರಿಪೂರ್ಣವಾಗಿ ಅರ್ಥೈಸಿಕೊಂಡಿದ್ದರೆ ಇಂದು ವಿವಿಧ ದೇಶಗಳ ನಡುವೆ ಯುದ್ಧಗಳು ಉದ್ಭವಿಸುತ್ತಿರಲಿಲ್ಲ ಎಂದರು.

ಜನಸಾಮಾನ್ಯರಲ್ಲಿ ಜ್ಞಾನಸುಧೆಯನ್ನು ಪಸರಿಸಿದ ಕೈವಾರ ತಾತಯ್ಯ ಅವರು ಕನ್ನಡ ಮತ್ತು ತೆಲುಗಿನಲ್ಲಿ ರಚಿಸಿದ ಹಲವು ಕೀರ್ತನೆಗಳನ್ನು ತಾಳೆಗರಿಗಳ ಮೂಲಕ ರಕ್ಷಿಸಿಡಲಾಗಿದೆ ಎಂದು ತಿಳಿಸಿದರು.ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರಾಜು, ಮುಖಂಡರಾದ ಚಂದ್ರಶೇಖರ್, ಪದ್ಮಾ ಪುರುಷೋತ್ತಮ್, ರಂಗರಾಮು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ನಗರದ ಶ್ರೀ ಚಾಮರಾಜೇಶ್ವರ ದೇವಾಲಯದ ಮುಂಭಾಗದಿಂದ ಜಿಲ್ಲಾಡಳಿತ ಭವನದವರೆಗೆ ಶ್ರೀ ಯೋಗಿನಾರೇಯಣ ಯತೀಂದ್ರ (ಕೈವಾರ ತಾತಯ್ಯ) ಅವರ ಭಾವಚಿತ್ರದ ಮೆರವಣ ಗೆ ನಡೆಯಿತು.

# ಕಾಮಗಾರಿಗೆ ಶಾಸಕ ಶ್ರೀವತ್ಸ ಚಾಲನೆ



ಮೈಸೂರು: ಕೃಷ್ಣರಾಜ ಕ್ಷೇತ್ರದ ವಾರ್ಡ್ ನಂ.59 ರಲ್ಲಿ ಬರುವ ಶ್ರೀರಾಂಪುರ ಎಲ್‌ಐಜಿ ಮನೆಗಳ ಮುಂಭಾಗ ಹಾಗೂ 807 ಹುಡ್ಕೋ ಬಡಾವಣೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹತ್ತಿರ ರಸ್ತೆ ಹಾಗೂ ಬಾಕ್ಸ್ ಡ್ರೈನ್ ಅಭಿವೃದ್ಧಿಗೆ ಅಂದಾಜು 72 ಲಕ್ಷ ರೂ.ಗಳ ಕಾಮಗಾರಿಗೆ ಶಾಸಕ ಟಿ.ಎಸ್.ಶ್ರೀವತ್ಸ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಬಿಜೆಪಿ ಮುಖಂಡ ರಾಜೇಶ್ ಜಾದವ್, ಹೇಮಂತ್ ಕುಮಾರ್, ಮಂಜುನಾಥ್, ಪ್ರಸನ್ನ, ಸಚಿನ್, ರೂಪ, ಮಂಜುಳಾ, ನಗರಪಾಲಿಕೆ ಮಾಜಿ ಅಧಿಕಾರಿ ಚೇತನ್ ಬಾಬು, ಇಂಜನೀಯರ್ ಶಿವಮೂರ್ತಿ ಇತರರು ಇದ್ದರು.

## ತಾಯಿ ಮಡಿಲು ಸೇರಿದ ಚಿರತೆ ಮರಿಗಳು

ಗುಂಡ್ಲುಪೇಟೆ: ತಾಲೂಕಿನ ಪಡಗೂರು ಗ್ರಾಮದ ಜಮೀನಿನಲ್ಲಿ ಸಿಕ್ಕಿದ ಚಿರತೆ ಮರಿಗಳನ್ನು ಮತ್ತೆ ತಾಯಿಯೊಂದಿಗೆ ಸೇರಿಸಲು ಅರಣ್ಯ ಇಲಾಖೆ ಮುಂದಾಗಿದೆ.

ಮಂಗಳವಾರ ತಾಲೂಕಿನ ಪಡಗೂರು ಗ್ರಾಮದ ಶಿವಕುಮಾರ್ ಎಂಬುವರ ಬಾಳೆಯ ತೋಟದಲ್ಲಿ ಎರಡರಿಂದ ಮೂರು ತಿಂಗಳು ವಯಸ್ಸಿನ ಎರಡು ಚಿರತೆ ಮರಿಗಳು ಪತ್ತೆಯಾಗಿವೆ. ವಿಷಯ ತಿಳಿದ ಅರಣ್ಯ ಸಿಬ್ಬಂದಿ ಮರಿಗಳನ್ನು ಹುಡುಕಿಕೊಂಡು ಬರುವ ತಾಯಿಗಾಗಿ ತಡರಾತ್ರಿ ಬೋನಿನೊಳಗೆ ಇರಿಸಿ ಕಾದುಕುಳಿತರೂ ಅದು ಬರಲಿಲ್ಲ. ಈ ಹಿನ್ನೆಲೆಯಲ್ಲಿ ಬುಧವಾರ ಬೆಳಗ್ಗೆ ಪಟ್ಟಣದ ಬಫರ್ ವಲಯದ ಕಚೇರಿಗೆ ಕೊಂಡೊಯ್ಯಲಾಗಿದೆ. ಅವುಗಳ ಆರೋಗ್ಯವನ್ನು ಪಶುವೈದ್ಯರಿಂದ ಪರೀಕ್ಷಿಸಿ ಹಾಲು ಕೊಡಲಾಗುತ್ತಿದೆ. ಬುಧವಾರ ಸಂಜೆ ಸಹಾ ಅವು ಸಿಕ್ಕಿದ ಸ್ಥಳದಲ್ಲಿ ಇರಿಸಿ ತಾಯಿಯೊಂದಿಗೆ ಸೇರಿಸಲು ಪ್ರಯತ್ನಿಸಲಾಗುವುದು ಎಂದು ಪ್ರಭಾರ ಆರ್‌ಎಫ್‌ಒ ಶಿವಕುಮಾರ್ ತಿಳಿಸಿದ್ದಾರೆ.



### ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು ಹೇಳಿಕೆ

# ಅಂಬೇಡ್ಕರ್ ವಿಚಾರಧಾರೆಗಳ ಜಾಗೃತಿ ನಿರಂತರವಾಗಿರಲಿ

ಚಾಮರಾಜನಗರ, ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರ ಧಾರೆಗಳನ್ನು ಜನಮಾನಸದಲ್ಲಿ ಜಾಗೃತಿಗೊಳಿಸುವ ಕಾರ್ಯಕ್ರಮಗಳು ಇನ್ನೂ ಹೆಚ್ಚು ಮೂಡಿ ಬರಲಿ ಎಂದು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷಾಷ್ಠನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು ತಿಳಿಸಿದರು.

ನಗರದ ಚಾಮರಾಜೇಶ್ವರ ದೇವಾಲಯದ ಮುಂಭಾಗದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಭೀಮ ಗಾಯನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಡಾ. ಬಿ.ಆರ್. ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ಜನರಿಗೆ ತಲುಪಿಸುವ ದಿಸೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದು ಸಂತಸ ತಂದಿದೆ. ಗಾಯನದ ಮೂಲಕ ಅಂಬೇಡ್ಕರ್ ಅವರ ಕುರಿತು ತಿಳಿಸುವ ಇಂತಹ ಇನ್ನಷ್ಟು ವಿಭಿನ್ನ ಇತರೆ ಕಾರ್ಯಕ್ರಮಗಳೂ




ಸಹ ಹೆಚ್ಚು ಆಗಬೇಕಿದೆ. ಮಹಾನ್ ಚೇತನ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಸಂವಿಧಾನದ ಬಗ್ಗೆ ವಿಚಾರ ತಿಳಿಸುವ ಕಾರ್ಯಗಳು ನಿರಂತರವಾಗಿರಲಿ ಎಂದು ಸಲಹೆ ಮಾಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ ವಿಶ್ವಜ್ಞಾನಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಅಸ್ಪೃಶ್ಯತೆ, ಅಸಮಾನತೆ ವಿರುದ್ದ ಹೋರಾಡಿದವರು. ಅವರ ವಿಚಾರಗಳನ್ನು ಜನರಿಗೆ ತಿಳಿಸುವ ನಿಟ್ಟಿನಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸುತ್ತಿರುವುದು ಅರ್ಥಪೂರ್ಣವಾಗಿದೆ ಎಂದರು. ಅಂಬೇಡ್ಕರ್ ಅವರು ವ್ಯಕ್ತಿ ಅಲ್ಲ ದೊಡ್ಡ ಶಕ್ತಿ. ಶಿಕ್ಷಣ ಅಧ್ಯಯನದಿಂದ ಮೇರು ಎತ್ತರಕ್ಕೆ ಬೆಳೆದ ಡಾ. ಬಿ.ಆರ್. ಅಂಬೇಡ್ಕರ್ ಅವರ ಹೆಸರು ವಿಶ್ವ ಇರುವವರೆಗೂ ಶಾಶ್ವತವಾಗಿರಲಿದೆ. ಪ್ರಪಂಚದೆಲ್ಲೆಡೆ ಅಂಬೇಡ್ಕರ್ ಅವರ ಜ್ಞಾನದ ಬಗ್ಗೆ ಹೆಚ್ಚಿನ ಗೌರವ ಇದೆ ಎಂದು ತಿಳಿಸಿದರು. ಕಾರ್ಯಕ್ರಮದ ಆರಂಭದಲ್ಲಿ ಸಂವೀಧಾನ ಪೀಠಿಕೆ ವಾಚಿಸಲಾಯಿತು. ಡಾ. ಬಿ.ಅರ್. ಅಂಬೆ ೀಡ್ಕರ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷಾಷಪರ್ಚನೆ ಮಾಡಿ ನಮಿಸಿದರು. ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕರಾದ ಎ. ರಮೇಶ್, ಜಿಲ್ಲಾಧಿಕಾರಿಗಳ ಕಚೇರಿಯ ಶಿರಸ್ತೇದಾರರಾದ ರಂಗರಾಜು, ಜಾನ ಪದ ಗಾಯಕ ಸಿ.ಎಂ. ನರಸಿಂಹಮೂರ್ತಿ ಉಪ ಸ್ಥಿತರಿದ್ದರು. ಮೈಸೂರು ಜಿಲ್ಲೆಯ ಸರಗೂರಿನ ಡಾ. ಅಮ್ಮ ರಾಮಚಂದ್ರ ನೇತೃತ್ವದ ತಂಡದ ಕಲಾವಿದರು ಅಂಬೇಡ್ಕರ್ ಕುರಿತ ಗೀತ ಗಾಯನ ನಡೆಸಿಕೊಟ್ಟರು. 25ಕ್ಕೂ ಹೆಚ್ಚು ಗೀತೆಗಳನ್ನು ಅಮ್ಮ ರಾಮಚಂದ್ರ ಹಾಗೂ ಸಹಕಲಾವಿದರ ಕಂಠದಲ್ಲಿ ಮೂಡಿಬಂದಿತು.

## ನಾಳೆಯಿಂದ 18ನೇ ಕನ್ನಡ ವಿಜ್ಞಾನ ಸಮ್ಮೇಳನ ಸಮಾರಂಭ

ಚಾಮರಾಜನಗರ, 18ನೇ ಕನ್ನಡ ವಿಜ್ಞಾನ ಸಮ್ಮೇಳನವು ಮಾರ್ಚ್ 6 ಮತ್ತು 7 ರಂದು ನಡೆಯಲಿದ್ದು, ಸಮಾರಂಭದ ಉದ್ಘಾಟನೆಯು ಮಾರ್ಚ್ 6 ರಂದು ಬೆಳಿಗ್ಗೆ 10.30 ಗಂಟೆಗೆ ಚಾಮರಾಜನಗರ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿದೆ.

ಕೇರಳದ ಕಾಸರಗೋಡು ಕೇಂದ್ರೀಯ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸಿದ್ದು ಪಿ. ಅಲಗೂರ್ ಅವರು ಕಾರ್ಯಕ್ರಮ ಉದ್ಘಾಟಿಸುವರು. ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್ ಅವರು ಅಧ್ಯಕ್ಷತೆ ವಹಿಸುವರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಶರಣಪ್ಪ ಬಿ. ಹಲಸೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ತಿರುವನಂತಪುರ ಐ,ಐ,ಎಸ್,ಟಿ ಕುಲಾಧಿಪತಿಗಳು, ಬೆಂಗಳೂರು ಇಸ್ರೋ ಖ್ಯಾತ ವಿಜ್ಞಾನಿಗಳು ಹಾಗೂ ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ. ಬಿ.ಎನ್. ಸುರೇಶ್ ಅವರು ದಿಕ್ಸೂಚಿ ಭಾಷಣ ಮಾಡುವರು. ಹಾವೇರಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸುರೇಶ್ ಹೆಚ್ ಜಂಗಮಶೆಟ್ಟಿ, ಕೊಡಗು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಆಶೋಕ ಎಸ್. ಅಲೂರ್, ಬೆಂಗಳೂರು ನಗರ ಡಾ. ಮನಮೋಹನ್ ಸಿಂಗ್ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಬಿ. ರಮೇಶ್ ಅವರು ಗೌರವ ಉಪಸ್ಥಿತಿ ವಹಿಸುವರು. ಭಾರತ ರತ್ನ ಡಾ. ಸರ್ ಎಂ. ವಿಶ್ವೇಶ್ವರಯ್ಯ ವಿಜ್ಞಾನ ಪುರಸ್ಕಾರ, ಭಾರತ ರತ್ನ ಡಾ. ಸಿ.ಎನ್.ಆರ್. ರಾವ್ ವಿಜ್ಞಾನ ಪುರಸ್ಕಾರ, ಭಾರತ ರತ್ನ ಡಾ. ಭೀಮ್ ಸೇನ್ ಜೋಶಿ ಸಾಂಸ್ಕೃತಿಕ ವಿಜ್ಞಾನ ಪುರಸ್ಕಾರ ಪ್ರಶಸ್ತಿ ನೀಡಲಾಗುವುದು.

ಮೈಸೂರು ಜೆ.ಎಸ್.ಎಸ್. ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಕೊಳ್ಳೇಗಾಲದ ಮಾನಸ ಶಿಕ್ಷಣ ಟ್ರಸ್ಟ್ ಕಾರ್ಯದರ್ಶಿಗಳಾದ ಡಾ. ಎಸ್. ದತ್ತೇಶ್ ಕುಮಾರ್, ಮೈಸೂರಿನ ಶಾರದ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ. ಹನುಮಂತಚಾರ್ ಜೋಶಿ ಅವರು ವಿಶೇಷ ಅಹ್ವಾನಿತರಾಗಿ ಪಾಲ್ಗೊಳ್ಳುವರು. ಸಮಾರೋಪ ಸಮಾರಂಭವು ಮಾರ್ಚ್ 7ರಂದು ಮಧ್ಯಾಹ್ನ 2.30 ಗಂಟೆಗೆ ನಡೆಯಲಿದೆ. ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್ ಅವರು ಅಧ್ಯಕ್ಷತೆ ವಹಿಸುವರು. ಬೆಂಗಳೂರು ಎಸ್– ವ್ಯಾಸ ವಿಶ್ವವಿದ್ಯಾಲಯದ ಪ್ರೊ.–ಕುಲಪತಿಗಳು ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಡಾ. ಪ್ರಹ್ಲಾದ ರಾಮರಾವ್, ಅಮೇರಿಕಾ ಎಂ.ಜಿ.ಐ ಸೈಬರ್ ಸೆಕ್ಯೂರಿಟಿ ಮತ್ತು ಎಐ ನಿರ್ದೇಶಕರಾದ ಡಾ. ಉದಯ ಶಂಕರ್ ಪುರಾಣಿಕ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು. ಹಾವೇರಿ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಸುರೇಶ್ ಹೆಚ್ ಜಂಗಮಶೆಟ್ಟಿ, ಕೊಡಗು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಆಶೋಕ ಎಸ್. ಅಲೂರ್, ಸರ್ ಸಿ.ವಿ ರಾಮನ್ ಪ್ರಶಸ್ತಿ ಪುರಸ್ಕೃತರು ಹಾಗೂ ಸ್ವದೇಶಿ ವಿಜ್ಞಾನ ಆಂದೋಳನ–ಕರ್ನಾಟಕ ರಾಜ್ಯ ಅಧ್ಯಕ್ಷರಾದ ಡಾ. ಎಂ.ಎಸ್. ಜೋಗದ್ ಅವರು ಗೌರವ ಉಪಸ್ಥಿತಿ ವಹಿಸುವರು. ಚಾಮರಾಜನಗರ ವಿಶ್ವವಿದ್ಯಾಲಯದ ಕುಲಸಚಿವರಾದ (ಮೌಲ್ಯಮಾಪನ) ಪ್ರೊ. ಕೆ.ಎಂ. ಮಹದೇವನ್, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಎಸ್.ಕೆ. ನವೀನ್ ಕುಮಾರ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

## ರಾಕೇಶ್ ಕುಮಾರ್ ನೇಮಕ



ಮೈಸೂರು: ಮೈಸೂರು ಮಹಾನರ ಪಾಲಿಕೆ ವ್ಯಾಪ್ತಿಯ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಗ್ಯಾರೆಂಟಿ ಯೋಜನೆಗಳ ಅನುಷ್ಠಾನ ಸಮಿತಿ ಸದಸ್ಯರಾಗಿ ಗಾಂಧಿನಗರ ನಿವಾಸಿ ಎಸ್.ರಾಕೇಶ್ ಕುಮಾರ್ ರನ್ನು ಸರ್ಕಾರದ ವತಿಯಿಂದ ನೇಮಕ ಮಾಡಲಾಗಿದೆ ಎಂದು ಪಾಲಿಕೆ ಉಪ ಆಯುಕ್ತ ತಿಳಿಸಿದ್ದಾರೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ನದಿಯಲ್ಲಿ ಮಹಿಳೆ ಶವ ಪತ್ತೆ

ಚಾಮರಾಜನಗರ,ಕೊಳ್ಳೇಗಾಲ ತಾಲೂಕಿನ ವೆಸ್ಲಿ ಸೇತುವೆ ಬಳಿ ಕಾವೇರಿ ನದಿಯಲ್ಲಿ ಮಹಿಳೆಯೊಬ್ಬರ ಶವ ಪತ್ತೆಯಾಗಿದ್ದು, ಬೆಳಕವಾಡಿ ಗ್ರಾಮದ ಲೋಕೇಶ್ ಎಂಬವರ ಪತ್ನಿ ರಶ್ಮಿ ( 39) ಎಂದು ಗುರುತಿಸಲಾಗಿದೆ.

ಬೆಳಕವಾಡಿ ಗ್ರಾಮದ ಲೋಕೇಶ್ – ರಶ್ಮಿ ದಂಪತಿಗಳು ವಿವಾಹವಾದ ಬಳಿಕ ತಮ್ಮ ಪುತ್ರಿಯೊಂದಿಗೆ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದರು ಎನ್ನಲಾಗಿದೆ. ಸಾಂಸಾರಿಕ ಜೀವನದಿಂದ ಬೇಸತ್ತ ರಶ್ಮಿ ಮಂಗಳವಾರ ಬೆಳಗ್ಗೆ ಬೆಂಗಳೂರಿಂದ ವಾಪಸ್ಸಾಗಿ ವೆಸ್ಲಿ ಸೇತುವೆ ಬಳಿ ಕಾವೇರಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಮೃತಳ ತಂದೆ ಕಿನಕನಹಳ್ಳಿ ಗ್ರಾಮದ ಬಸವಣ್ಣ ಗ್ರಾಮಾಂತರ ಪೊಲೀಸ್ ಠಾಣೆಗೆ ನೀಡಿರುವ ದೂರನ್ನು ದಾಖಲಿಸಿಕೊಂಡಿರುವ ಪೊಲೀಸರು ತನಿಕೆ ಕೈಗೊಂಡಿದ್ದಾರೆ.

## ಕೋಳಿಫಾರಂ ಗೆ ಬೆಂಕಿ ಅಪಾರ ಪ್ರಮಾಣದ ನಷ್ಟ

ಚಾಮರಾಜನಗರ, ತಾಲೂಕಿನ ಉಮ್ಮತ್ತೂರು ಗ್ರಾಮದ ಹೊರವಲಯದಲ್ಲಿ ಕೋಳಿಫಾರಂಗೆ ಬೆಂಕಿ ಬಿದ್ದು ಅಪಾರ ಪ್ರಮಾಣದಲ್ಲಿ ನಷ್ಟವಾಗಿದೆ. ಗ್ರಾಮದ ರಾಜೇಶ್ ಎಂಬವರಿಗೆ ಸೇರಿದ ಕೋಳಿಫಾರಂಗೆ ಬೆಳಗಿನಜಾವ ಬೆಂಕಿ ಬಿದ್ದು, ನಾಲ್ಕು ಸಾವಿರ ಕೋಳಿ ಮರಿಗಳು ಸೇರಿದಂತೆ ಇತರೆ ಪರಿಕರಕಗಳು ಸುಟ್ಟು ಕರಕಲಾಗಿವೆ. ಸುದ್ದಿ ತಿಳಿದ ತಕ್ಷಣ ಹೊಯ್ಸಳ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದರಲ್ಲದೆ ಮುಂದಿನ ಕ್ರಮ ಕೈಗೊಂಡಿದ್ದಾರೆ.

## ಶಾಸಕ ಶ್ರೀವತ್ಸ ಪಾದಯಾತ್ರೆ



ಮೈಸೂರು: ನಗರದಲ್ಲಿ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರದಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಪಾದಯಾತ್ರೆ ನಡೆಸಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು.

ಕ್ಷೇತ್ರದ ವಲಯ ಕಚೇರಿ–2ರ ವಾರ್ಡ್ ನಂಬರ್ 56 ಕೆ ಆರ್ ವನಂ ಭಾಗದ ವ್ಯಾಪ್ತಿಂಯಲ್ಲಿ ಪಾದಯಾತ್ರೆ ನಡೆಸಿದ ಶಾಸಕರು ಮನೆ ಮನೆಗಳಿಗೆ ಭೇಟಿ ನೀಡಿ ಅಲ್ಲಿನ ನಿವಾಸಿಗಳ ಸಮಸ್ಯೆಗಳನ್ನು ಕೇಳಿ ನಂತರ ಸ್ಥಳದಲ್ಲಿ ಅಧಿಕಾರಿಗಳಿ ಸೂಚನೆ ನೀಡಿದರು. ಪ್ರಮುಖವಾಗಿ ಯುಜಿಡಿ ನೀರು ಮಳೆ ನೀರಿನ ಚರಂಡಿಯಲ್ಲಿ ಹರಿಯುತ್ತಿರುವುದರ ಬಗ್ಗೆ ಜನರು ದೂರು ಹೇಳಿದಂತೆ ಸಂಬಂಧಪಟ್ಟ ಅಧಿಕಾರಿಗೆ ಮುಂದಿನ ವಾರದಿಂದ ಕಾಮಗಾರಿ ಆರಂಭಿಸಿ, ಸಮಸ್ಯೆ ಬಗೆಹರಿಸುವಂತೆ ತಿಳಿಸಿ, ಅಲ್ಲಿನ ಕನ್ಸರ್ವೆಸಿ ಗಲ್ಲಿಗಳಲ್ಲಿ ಬೆಳೆದಿರುವ ಗಿಡಗಳನ್ನು ಕ್ಲೀನ್ ಮಾಡಬೇಕು ಹಾಗೂ ಕೆಲವೆಡೆ ಬೀದಿ ದೀಪಗಳ ಸಮಸ್ಯೆಯನ್ನು ಹೇಳಿದರು ಮುಂದಿನ 15ದಿನದೊಳಗೆ ಸರಿ ಪಡಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಪ್ರತಿ ಮನೆಗಳಿಗೆ ಭೇಟಿ ನೀಡುತ್ತಿದ್ದಂತೆ ಅವರಿಗೆ ಜನರು ನೋಟ್ ಬುಕ್ ನೀಡುವ ಮೂಲಕ ಸ್ವಾಗತ ಮಾಡಿಕೊಂಡಿದ್ದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ವಾರ್ಡ್ ಅಧ್ಯಕ್ಷ ದೀಪಕ್, ಬಿಜೆಪಿ ಮುಖಂಡರಾದ ವಿಶ್ವೇಶ್ವರಯ್ಯ, ಜಯರಾಮ್, ನಾಗರಾಜ್, ಬಿಲ್ಲಯ್ಯ, ಪಿ.ಟಿ.ಕೃಷ್ಣ ಮಧುಸೂದನ್, ಜಿತೇಂದ್ರ, ರಾಮ, ಅಮಿತ್, ಸ್ಥಳೀಯರಾದ ಸತೀಶ್, ದಿನೇಶ್, ಅಡಿಗ ಅನಂತರಾಮು, ಯೋಗರಾಜು, ಶ್ರೀಕಾಂತ್ ಮತ್ತಿತರರು ಉಪಸ್ಥಿತರಿದ್ದರು.

## ಮೀಸಲಾತಿ ಆದೇಶ ಹಿಂಪಡೆಯಿರಿ



ಮೈಸೂರು: ರಾಜ್ಯ ರ?ಕಾರ ಶೀಘ್ರದಲ್ಲೇ ಭರ್ತಿ ಮಾಡಿಕೊಳ್ಳಲಿರುವ ಸುಮಾರು 56 ಸಾವಿರ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿ ಕುರಿತು ನ್ಯಾಯಾಲಯದ ಆದೇಶ ಧಿಕ್ಕರಿಸಿ ಸರ್ಕಾರ ಹೊರಡಿಸಿರುವ (ಸಚಿವ ಸಂಪುಟ ಹೊರಡಿಸಿರುವ)ಆದೇಶ ಹಿಂಪಡೆಯಬೇಕು. ಇಲ್ಲದಿದ್ದರೆ ರಾಜ್ಯದಲ್ಲಿ ರಕ್ತ ಕ್ರಾಂತಿಯಾದೀತು ಎಂದು ಸಾಮಾಜಿಕ ನ್ಯಾಯಪರ ವೇದಿಕೆ ಅಧ್ಯಕ್ಷ ಹಾಗೂ ಹಿರಿಯ ವಕೀಲರಾದ ಎಸ್.ಅರುಣ್‌ಕುಮಾರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಳ ಮೀಸಲಾತಿಗೆ ಸಂಬಂಧಿಸಿದಂತೆ ಹೈಕರ?ಟ್‌ನಲ್ಲಿ ಎರಡು ರಿಟ್ ಅರ್ಜಿಗಳು ಇವೆ. ಇವುಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯ ಆದೇಶ ನೀಡುವಾಗ ಮೀಸಲಾತಿ ಹಂಚಿಕೆಯು ಶೇ. 56 ರನ್ನು ಮೀರುವ ವೇಳೆ ತೊಡಕು ಇರುವ ಕಾರಣ ಹಾಗೂ ಅಂತಿಮ ಆದೇಶ ಹೊರ ಬೀಳುವವರೆಗೆ, ಶೇಕಡಾ 6ರಷ್ಟು ಮೀಸಲಿನ ಪ್ರಮಾಣವನ್ನು ತಡೆಹಿಡಿದು, ಉಳಿದ ಶೇಕಡಾ 50ರಲ್ಲಿ ಮೀಸಲು ಹಂಚಿಕೆಗೆ ಕ್ರಮ ವಹಿಸಬೇಕು ಎಂದು ತಿಳಿಸಿದೆ.

ಇದಕ್ಕೆ ಸಂಬಂಧಿಸಿದಂತೆ ಹಾಗೂ ಒಳ ಮೀಸಲಾತಿ ಜಾರಿ ವಿವಾದಗಳು ತಾರಕಕ್ಕೇರುತ್ತಿರುವುದನ್ನು ಗಮನಿಸಿ ಈಚೆಗೆ ನಡೆದ ಸಂಪುಟ ಸಭೆಯಲ್ಲಿ ಈ ಕುರಿತು ರ?ಚಿಸಲಾಗಿತ್ತು. ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಹಾ ಈ ಕುರಿತು ಸಭೆಗೆ ಮಾಹಿತಿ ನೀಡಿದ್ದರು. ಈ ವೇಳೆ ಸಂಪುಟ ಕೈಗೊಂಡ ನರ?ಧಾರ ಹಾಗೂ ನ್ಯಾಯಾಲಯದ ಸೂಚನೆ ಧಿಕ್ಕರಿಸಿ ಮೀಸಲಾತಿಗೆ ಸಂಬಂಧಿಸಿದಂತೆ 1995 ರ ರೋಸ್ಟರ್ ಬಿಂದು ಅನುಸರಿಸುವಂತೆ ಆದೇಶ ಹೊರಡಿಸುವಲ್ಲಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹಾಗೂ ಹಿರಿಯ ಅಧಿಕಾರಿ ರಂದೀಪ್ ನೋಡಿಕೊಂಡಿದ್ದಾರೆ. ಹೀಗಾಗಿ ಈ ಇಬ್ಬರೂ ಕಠಿಣ ಕ್ರಮಕ್ಕೆ ಗುರಿಯಾಗುವ ಸಾಧ್ಯತೆಯಿದೆ ಎಂದರು.

ಇನ್ನಿತರ ಹಿರಿಯ ವಕೀಲರಾದ ಮಾಳಪ್ಪ ಕರ?ಕಿ, ಶಿವಕುಮಾರ್ ಎಂ. ಬೆಳ್ತೂರು, ಎಂ.ಆರ್. ಸುರೇಂದ್ರಕುಮಾರ್, ಸಿದ್ದಯ್ಯ, ಮಲ್ಲು, ಬೂದಿತಿಟ್ಟು ರಾಜೇಂದ್ರ, ದಾಸಯ್ಯ ಇದ್ದರು.

# ನೀರು ತುಂಬಿಸುವ ಯೋಜನೆಗೆ ಚಾಲನೆ?

## ಬಜೆಟ್‌ನಲ್ಲಿ ಅನುಮೋದನೆ ಸಿಗುವ ಆಶಾಭಾವನೆ: ಮಾಜಿ ಶಾಸಕ ಆರ್.ನರೇಂದ್ರ



ಹನೂರು: 9 ವರ್ಷಗಳ ಕಾಲ ನಡೆಸಿದ ನಿರಂತರ ಹೋರಾಟ, ಕ್ಷೇತ್ರದ ರೈತ ಸಂಘದ ಹೋರಾಟಗಾರರ ಶ್ರಮ ಹಾಗೂ ಸರ್ಕಾರದ ಸಹಕಾರದಿಂದ ಉಡುತೊರೆ ಹಳ್ಳ ಜಲಾಶಯಕ್ಕೆ ಏತ ನೀರಾವರಿ ಯೋಜನೆಯ ಮೂಲಕ ನೀರು ತುಂಬಿಸುವ ಯೋಜನೆಗೆ ಬಜೆಟ್ ನಲ್ಲಿ ಅನುಮೋದನೆ ಸಿಗುವ ಆಶಾ ಭಾವನೆ ಇದೆ ಎಂದು ಮಾಜಿ ಶಾಸಕ ಆರ್ ನರೇಂದ್ರ ತಿಳಿಸಿದರು.

ಹನೂರು ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ನಾನು ಶಾಸಕನಾಗಿದ್ದಾಗ ಹನೂರು ವಿಧಾನಸಭಾ ಕ್ಷೇತ್ರದ ಪ್ರಮುಖ ಮೂರು ಜಲಾಶಯಗಳಾದ ಹುಬ್ಬೆ ಹುಣಸೆ, ರಾಮನ ಗುಡ್ಡ, ಗುಂಡಾಲ್ ಜಲಾಶಯಗಳಿಗೆ 132 ಕೋಟಿ ವೆಚ್ಚದಲ್ಲಿ ನೀರು ತುಂಬಿಸುವ ಯೋಜನೆಗೆ ಚಾಲನೆ ನೀಡಿ ಗುಂಡಾಲ್ ಜಲಾಶಯಕ್ಕೆ ನೀರು ತುಂಬಿಸಲಾಗಿತ್ತು. ಈ ವೇಳೆ ರಾಮಾಪುರ ಹೋಬಳಿ ವ್ಯಾಪ್ತಿಯ ರೈತರು ಉಡುತೊರೆ ಹಳ್ಳ ಜಲಾಶಯ, ಕೀರೆಪಾತಿ, ಹಾಲೇರಿಕೆರೆ ನೀರು ತುಂಬಿಸುವಂತೆ ಮುಖ್ಯಮಂತ್ರಿಗಳಾಗಿದ್ದ ಯಡಿಯೂರಪ್ಪರವರಿಗೆ ಮನವಿ ಸಲ್ಲಿಸಿದ್ದರು. ನಾನು ಸಹ ಬರಪೀಡಿತ ಪ್ರದೇಶಗಳಿಗೆ ನೀರು ತುಂಬಿಸುವುದರಿಂದ ಹೆಚ್ಚಿನ ಅನುಕೂಲವಾಗಲಿದ್ದು ಅಂತರ್ಜಲ ಮಟ್ಟ ಹೆಚ್ಚಾಗಲಿದೆ ಎಂದು ಮನವರಿಕೆ ಮಾಡಿಕೊಟ್ಟಿದ್ದೆ. ಅದರಂತೆ 110 ಕೋಟಿ ವೆಚ್ಚದಲ್ಲಿ ಡಿಪಿಆರ್ ಮಾಡಲಾಗಿತ್ತು. ಇನ್ನೇನು ಹೊಸ ಯೋಜನೆಗೆ ಅನುಮೋದನೆಗೊಂಡು ದೊಡ್ಡ ಪೈಪ್ ಅಳವಡಿಕೆ ಮಾಡಿದರೆ ರಾಮನಗುಡ್ಡ ಹಾಗೂ ಜಲಾಶಯಗಳಿಗೆ ಕಡಿಮೆ ದಿನಗಳ ಅವಧಿಯಲ್ಲಿ ನೀರು ತುಂಬಿಸಬಹುದು ಎಂದು ಅಂದುಕೊಂಡಿದ್ದೆವು, ಆದರೆ ಮುಖ್ಯಮಂತ್ರಿಗಳಾ ಗಿದ್ದ ಯಡಿಯೂರಪ್ಪನವರು ಬದಲಾವಣೆಯಾದ ನಂತರ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ ರವರು ಅನುದಾನ ನೀಡದೆ ಇರುವುದರಿಂದ ಏತ ನೀರಾವರಿ ಯೋಜನೆ ಸ್ಥಗಿತವಾಗಿತ್ತು. ಒಟ್ಟಾರೆ ಕೆಲವು ಬದಲಾವಣೆಗಳಿಂದ ಎರಡು ಜಲಾಶಯಗಳಿಗೆ ನೀರು ತುಂಬಿಸುವ ಕಾಮಗಾರಿಯು ವಿಳಂಬವಾಯಿತು ಎಂದು ಸ್ಪಷ್ಟಪಡಿಸಿದರು.

ಇದೀಗ ರಾಮಪುರ ಹೋಬಳಿ ವ್ಯಾಪ್ತಿಯ ಪ್ರಮುಖ ಜಲಾಶಯಗಳು ಸೇರಿದಂತೆ ಕೆರೆಕಟ್ಟೆಗಳಿಗೆ ನೀರು ತುಂಬಿಸುವ 490 ಕೋಟಿ ವೆಚ್ಚದಲ್ಲಿ ಏತ ನೀರಾವರಿ ಯೋಜನೆಗೆ ಬಜೆಟ್ ನಲ್ಲಿ ಅನುದಾನ ನೀಡುವಂತೆ ಕಳೆದ ವಾರ ಮುಖ್ಯಮಂತ್ರಿಗಳ ಜೊತೆಯೂ ಚರ್ಚಿಸಿದ್ದೇನೆ. ಜಿಲ್ಲಾ ಉಸ್ತುವಾರಿ ಸಚಿವರಾದ ವೆಂಕಟೇಶ್‌ರವರು ಸಂಸದರಾದ ಸುನೀಲ್ ಬೋಸ್, ಸಮಾಜ ಕಲ್ಯಾಣ ಇಲಾಖೆ ಸಚಿವರಾದ ಮಹದೇವಪ್ಪ ರವರು ಸಹ ಮುಖ್ಯಮಂತ್ರಿಗಳ ಬೇರೆ ಒತ್ತಡ ಹಾಕಿ ಈ ನೀರಾವರಿ ಯೋಜನೆ ಅನುಷ್ಠಾನ ಆಗಲೇಬೇಕು ಎಂದಿರುವುದರಿಂದ ಮುಖ್ಯಮಂತ್ರಿಗಳು ಸಹ ಬಜೆಟ್ ನಲ್ಲಿ ಸೇರ್ಪಡೆ ಮಾಡಿ ಸುಮಾರು 70 ಕೋಟಿ ಅನುದಾನ ನೀಡುವ ವಿಶ್ವಾಸವಿದೆ ಎಂದರು.

ಒಟ್ಟಾರೆ ಒಂದು ಯೋಜನೆಗೆ ಬಜೆಟ್ ನಲ್ಲಿ ಅನುಮೋದನೆಯಾಗಿ ಸಚಿವ ಸಂಪುಟ ಸಭೆಯಲ್ಲಿ ಒಪ್ಪಿಗೆ ನಿರ್ಣಯ ಮಾಡಿದ ನಂತರ ಹಣಕಾಸು ಇಲಾಖೆಯಿಂದ ಒಪ್ಪಿಗೆ ಸೂಚಿಸಿದರೆ ಯಾವ ಸರ್ಕಾರ ಬಂದರು ಯೋಜನೆ ಅನುಷ್ಠಾನಗೊಳ್ಳಲಿದೆ ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯರವರು ನಮ್ಮ ಭಾಗದ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗೆ ಅನುದಾನ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಾನವ ಹಾಗೂ ಕಾಡು ಪ್ರಾಣಿಗಳ ಸಂಘರ್ಷ ಹೆಚ್ಚಾಗುತ್ತಿರುವುದರಿಂದ ಪ್ರತಿನಿತ್ಯ ಒಂದಲ್ಲ ಒಂದು ಪ್ರಕರಣಗಳು ಮರುಕಳಿಸುತ್ತಿವೆ. ಇದರಿಂದ ಸಾವು ನೋವುಗಳು ಉಂಟಾಗುತ್ತಿದೆ ಸರ್ಕಾರ ಪರಿಹಾರ ನೀಡುವುದರಿಂದ ಯಾವುದೇ ಸಮಸ್ಯೆ ಬಗೆಹರಿಯುವುದಿಲ್ಲ ಇದರ ಬದಲು ಕಾಡು ಪ್ರಾಣಿಗಳ ನಿಯಂತ್ರಣಕ್ಕೆ ಅಗತ್ಯ ಕ್ರಮ ವಹಿಸಬೇಕು. ಕಾಡು ಪ್ರಾಣಿಗಳಿಂದ ಆಗುವ ಬೆಳೆ ನಾಶಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವೈಜ್ಞಾನಿಕವಾಗಿ ಪರಿಹಾರ ನೀಡಬೇಕು ಪ್ರಸ್ತುತ ನೀಡುತ್ತಿರುವ ಪರಿಹಾರ ಕಡಿಮೆ ಇರುವುದರಿಂದ ಮುಂದಿನ ದಿನಗಳಲ್ಲಿ ಹೆಚ್ಚು ಮಾಡಿ ರೈತರಿಗೆ ನೆರವಾಗಬೇಕು ಎಂದು ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ ಪ್ರಚಾರ ಸಮಿತಿ ಅಧ್ಯಕ್ಷ ಮಧುವನಹಳ್ಳಿ ಶಿವಕುಮಾರ್, ಪಟ್ಟಣ ಪಂಚಾಯಿತಿ ಮಾಜಿ ಉಪಾಧ್ಯಕ್ಷರುಗಳಾದ ಮಾದೇಶ್, ಗಿರೀಶ್, ಹರೀಶ್, ಬಸವರಾಜು ನಾಮ ನಿರ್ದೇಶಿತ ಸದಸ್ಯ ನವೀನ್ ಮುಖಂಡರುಗಳಾದ ಸ್ವಾಮಿ, ಶಿವ ಮಾದೇಗೌಡ ಇನ್ನಿತರರು ಹಾಜರಿದ್ದರು

### ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ

ಹನೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಮರ್ಪಕ ಮಳೆಯಾಗದೇ ಇರುವುದರಿಂದ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಈಗಾಗಲೇ ಅಧಿಕಾರಿಗಳು ಸಮಸ್ಯೆ ಇರುವ ಕಡೆ ಭೇಟಿ ನೀಡಿದ್ದಾರೆ. ನೀರಿನ ಸಮಸ್ಯೆ ಇರುವ ಕಡೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ ಕೆಲವು ಕಡೆ ತುರ್ತು ಕೊಳವೆಬಾವಿ ಕೊರಸಬೇಕಿದೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ವಹಿಸಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು, ಮುಂದಿನ ದಿನಗಳಲ್ಲಿ ಮತ್ತಷ್ಟು ಬೇಸಿಗೆ ಹೆಚ್ಚಾಗುವುದರಿಂದ ಕುಡಿಯುವ ನೀರಿನ ಸಮಸ್ಯೆ ಬಾರದಂತೆ ಅಗತ್ಯ ಕ್ರಮ ವಹಿಸಬೇಕು ಎಂದು ಸಲಹೆ ನೀಡಿದರು.

### ಪ್ರತಿಭಟನೆ ಕೈ ಬಿಟ್ಟು ಸಹಕಾರ ನೀಡಿ

ಕಳೆದ 125 ದಿನಗಳಿಂದ ಮಾಟಳ್ಳಿ ಭಾಗದ ರೈತರು ತಂಡಳ್ಳಿ ಏತ ನೀರಾವರಿ ಯೋಜನೆ ಅನುಷ್ಠಾನ ಮಾಡುವಂತೆ ಧರಣಿ ನಡೆಸುತ್ತಿದ್ದಾರೆ. ಬಜೆಟ್ ನಲ್ಲಿ ಉಡುತೊರೆ ಹಳ್ಳ ಜಲಾಶಯ ಸೇರಿದಂತೆ ಪ್ರಮುಖ ಕೆರೆಕಟ್ಟೆಗಳಿಗೆ ನೀರು ತುಂಬಿಸುವ ಯೋಜನೆಗಳಿಗೆ ಬಜೆಟ್ ನಲ್ಲಿ ಅನುದಾನ ಸಿಗುವ ನಿರೀಕ್ಷೆ ಇದೆ ಒಟ್ಟಾರೆ ನಿಮ್ಮ ಬೇಡಿಕೆಯಂತೆ ಪ್ರಮುಖ ಕೆರೆ ಕಟ್ಟೆಗಳಿಗೂ ಈ ಯೋಜನೆಯಲ್ಲಿ ನೀರು ತುಂಬಿಸುವುದರಿಂದ ಪ್ರತಿಭಟನೆ ಕೈ ಬಿಟ್ಟು ಸಹಕಾರ ನೀಡಬೇಕೆಂದು ಮನವಿ ಮಾಡಿದರು.

ಕರ್ನಾಟಕ ಸರ್ಕಾರ

**ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ಸಮಗ್ರ ಶಿಕ್ಷಣ ಕರ್ನಾಟಕ,**

ನಂ.205, ಜಿಲ್ಲಾ ಆಡಳಿತ ಭವನ, 2ನೇ ಮಹಡಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ದೂರವಾಣಿ : 08226 224429 ಇ–ಮೇಲ್: dpocham@gmail.com

ಕಪಸಂ: ಸಶಿಕ/ಸಿ2/ಇ.ಲ್ಯಾ.ಟೆಂ/03/2025–26 ದಿನಾಂಕ : 27.02.2026

**: ಅಲ್ಪಾವಧಿ ಮರು ಇ–ಟೆಂಡರ್ ಪ್ರಕಟಣೆ :**

**2025–26ನೇ** ಸಾಲಿನಲ್ಲಿ ಉಪನಿರ್ದೇಶಕರು(ಆಡಳಿತ) ಹಾಗೂ ಪದನಿಮಿತ್ತ, ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಚಾಮರಾಜನಗರ ಇವರಿಂದ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ ಆವಿಷ್ಕಾರ ಇನ್ನೊವೇಶನ್ ಲ್ಯಾಬ್‌ಗಳ ಸ್ಥಾಪನೆಗಾಗಿ **03** ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಹಾಗೂ **03** ಆದರ್ಶ ವಿದ್ಯಾಲಯಗಳಿಗೆ ಇನ್ನೋವೇಶನ್ ಲ್ಯಾಬ್‌ಗಳ ಸ್ಥಾಪನೆಗಾಗಿ ಸಾಧನ ಸಲಕರಣೆಗಳನ್ನು ಸರಬರಾಜು ಮಾಡಿ ಅಳವಡಿಸಲು ಅಧಿಕೃತ ಬಿಡ್‌ದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಮರು ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ನ ಮೊತ್ತ **ರೂ.4794000/–** ಗಳಾಗಿರುತ್ತದೆ. ಟೆಂಡರ್‌ನ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಮತ್ತು ತಿರಸ್ಕರಿಸುವ ಹಕ್ಕನ್ನು ಟೆಂಡರ್ ಪ್ರಾಧಿಕಾರಿಯು ಹೊಂದಿರುತ್ತಾರೆ. ಆಸಕ್ತ ಮತ್ತು ಅರ್ಹ ಗುತ್ತಿಗೆದಾರರು ಸದರಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಆನ್‌ಲೈನ್ ಮೂಲಕ **ದಿನಾಂಕ:09.03.2026ರೊಳಗೆ ಸಾಯಂಕಾಲ 5.30** ಗಂಟೆಯೊಳಗೆ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಅಪ್‌ಲೋಡ್ ಮಾಡಬಹುದಾಗಿದೆ. ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನಲ್ಲಿ ತಾಂತ್ರಿಕ ಕಾರಣಗಳಿಂದಾಗಿ ಟೆಂಡರ್ ತೆರೆಯುವ ದಿನಾಂಕವನ್ನು ಮುಂದೂಡಿದಲ್ಲಿ ಸದರಿ ದಿನಾಂಕವನ್ನೇ ಪರಿಗಣಿಸುವುದು. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ನಲ್ಲಿ ನೋಡಬಹುದಾಗಿದೆ.

**ಸಹಿ/–ಉಪನಿರ್ದೇಶಕರು ಹಾಗೂ ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು,**

ಸಂ:ವಾಸಾಸಂಇ:ಚಾನಗರ:760:2025–26 **ಸಮಗ್ರ ಶಿಕ್ಷಣ ಕರ್ನಾಟಕ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ,**

ಜಾಹಿರಾತಿಗೆ ಉತ್ತಮ ಮಾಧ್ಯಮ ವರ್ತಮಾನ

ಕರ್ನಾಟಕ ಸರ್ಕಾರ

**ಲೋಕೋಪಯೋಗಿ, ಇಲಾಖೆ ವಿಭಾಗ, ಮಂಡ್ಯ**

ಕಾರ್ಯಪಾಲಕಇಂಜಿನಿಯರ್‌ರವರ ಕಛೇರಿ,

**ಸಂ: 25/2025–2026** **ದಿನಾಂಕ: 02.03.2026**

**ಮಂಡ್ಯ ಜಿಲ್ಲೆಯ ವಿವಿಧ ಕಾಮಗಾರಿಗಳಿಗಾಗಿ ಅಲ್ಪಾವಧಿ ಟೆಂಡರ್ ಪ್ರಕಟಣೆ**

ಐಟಂವಾರು ದರದ ಟೆಂಡರುಗಳ ಕಾಮಗಾರಿಗಾಗಿ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **KW-1** ರ ರೀತಿ ದ್ವಿಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp. karnataka. gov.in** ಮುಖಾಂತರ ಕಾಮಗಾರಿಯ ಟೆಂಡರ್‌ಗಾಗಿ ಭಾಗವಹಿಸಬಹುದು.

ಟೆಂಡರ್ ದಾಖಲಾತಿಗಳನ್ನು **ದಿನಾಂಕ: 03.03.2026** ರಿಂದ ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ವಿಚಾರಣೆ **ದಿನಾಂಕ : 10.03.2026 ಸಂಜೆ 4.00** ಘಂಟೆವರೆಗೆ, ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 11.03.2026 ಸಂಜೆ 4.30** ಘಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 12.03.2026 ಬೆಳಿಗ್ಗೆ 11.00** ಘಂಟೆ ನಂತರ ಅಥವಾ ನಂತರದ ಕೆಲಸದ ದಿನಗಳು,. ಟೆಂಡರ್ ಪ್ರಕ್ರಿಯೆ ಬೆಲೆ ಇ–ಪೋರ್ಟಲ್‌ರಂತೆ. ಕಾಲಮಿತಿ: ಮಳೆಗಾಲ ಸೇರಿ 2 ತಿಂಗಳು ಒಟ್ಟು 05 (ಐದು) ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ.20.00** ಲಕ್ಷಗಳು ಕನಿಷ್ಠ ಅಂದಾಜು ಮೊತ್ತ **ರೂ.10.00 ಲಕ್ಷಗಳು** ಇ.ಎಂ.ಡಿ. ಬೆಲೆ ಇ–ಪೋರ್ಟಲ್‌ರಂತೆ, ಕೆಲಸಗಳ ವಿವರ, ಅಂದಾಜು ಮೊತ್ತ, ಇ.ಎಂ.ಡಿ., ಮೊತ್ತ ಮುಂತಾದ ಮಾಹಿತಿಗಳನ್ನು ಸದರಿ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಟಿಪ್ಪಣಿ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ್ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ.
2. ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

**ಸಹಿ/– ಕಾ.ಇಂ.,ಲೋ.ಇ.,ವಿಭಾಗ, ಮಂಡ್ಯ**

### ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ ವತಿಯಿಂದ ಮನವಿ

# ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಸಿಎಂಗೆ ಮನವಿ



ಚಾಮರಾಜನಗರ, ಬಜೆಟ್ ನಲ್ಲಿ ಎಸ್ ಸಿ, ಎಸ್ ಟಿ ಸಮುದಾಯಕ್ಕೆ ಜನಸಂಖ್ಯೆಯ ಆಧಾರದ ಮೇಲೆ ಕಟ್ಟುನಿಟ್ಟಾಗಿ ಶೇ.24.1 ಅನುದಾನವನ್ನು ಮೀಸಲಿಡಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಜವರೇಗೌಡ ಅವರ ಮುಖಾಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಲಾಯಿತು. ಒಳಮೀಸಲಾತಿ ಯಲ್ಲಿ ಸೃಷ್ಟಿಯಾಗಿರುವ ರೋಸ್ಟರ್ ಬಿಂದು ಗೊಂದ ಲವನ್ನು ಸರಿಪಡಿಸಿ ಎಲ್ಲಾ 101 ಪರಿಶಿಷ್ಟ ಜಾತಿಗೂ ಅನ್ಯಾಯವಾಗದಂತೆ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಬೇಕು.ಹಾಸ್ಟೆಲ್ ಬಯಸಿ ಅರ್ಜಿ ಸಲ್ಲಿಸುವ ಎಲ್ಲಾ ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ಪ್ರವೇಶವನ್ನು ನೀಡಬೇಕು. ನಿರಂತರವಾಗಿ ಪಾಠ ಏರ್ಪಾಡಬೇಕು.

ರಾಜ್ಯದಲ್ಲಿ ನಾಗರೀಕ ಹಕ್ಕುಗಳ ರಕ್ಷಣೆ ಕಾಯ್ದೆ ಮತ್ತು ದೌರ್ಜನ್ಯ ತಡೆಕಾಯ್ದೆಗಳ ಅನುಷ್ಠಾನ ಸಮರ್ಪಕವಾಗಿ ಆಗುತ್ತಿಲ್ಲ. ಅಪರಾಧಗಳ ಪತ್ತೆ ಮತ್ತು ವಿಚಾರಣೆ ಸರಿಯಾಗಿ ನಡೆದು ರಕ್ಷಣೆಯಾಗುವ ಪ್ರಮಾಣ ಸರಿಯಾಗಿ ಆಗುವಂತೆ ನಿಗಾವಹಿಸಲು ಪ್ರತ್ಯೇಕ ಸಮಿತಿಯನ್ನು ಸ್ಥಾಪಿಸಬೇಕು.

ಪ್ರತಿ ಗ್ರಾಮದಲ್ಲಿ ದಲಿತರಿಗೆ ಸ್ಮಶಾನ ಭೂಮಿಯನ್ನು ಕಡ್ಡಾಯವಾಗಿ ಮೀಸಲಿರಿಸಬೇಕು. ಎಸ್.ಸಿ/ಎಸ್.ಟಿ ಮೀಸಲಾತಿಗೆ ನಿಗಧಿಪಡಿಸಿರುವ ಆದಾಯ ಮಿತಿ 15 ಲಕ್ಷಕ್ಕೆ ಏರಿಸಬೇಕು. ಅರ್ಚಕ ಮತ್ತು ಪೌರಕಾರ್ಮಿಕ ವೃತ್ತಿಯನ್ನು ಸಾರ್ವತ್ರಿಕಗೊಳಿಸಬೇಕು. ಈ ಎರಡು ವೃತ್ತಿಗಳಲ್ಲಿ ಮೀಸಲಾತಿ ನೀತಿಯನ್ನು ಅನುಷ್ಠಾನಕ್ಕೆ ತರಬೇಕು. ಹಂಗಾಮಿ ಪೌರಕಾರ್ಮಿಕರನ್ನು ಖಾಯಂಗೊಳಿಸಬೇಕು.ಖಾಸಗಿ ಕ್ಷೇತ್ರಗಳಲ್ಲಿ ಸಾಮಾಜಿಕ ನ್ಯಾಯದ ಹಿನ್ನೆಲೆಯ ಮೀಸಲಾತಿಯನ್ನು ಜಾರಿಗೊಳಿಸಬೇಕು. ಎಸ್.ಸಿ/ಎಸ್.ಟಿ ಸಮುದಾಯದ ಬ್ಯಾಕ್ ಲಾಗ್ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಬೇಕು.ಈ ಮೊದಲು ಫಾರಂ 57 ಹಾಕಿರುವವರಿಗೆ ಕೂಡಲೇ ಸಾಗುವಳಿ ಚೀಟಿ ಹಾಗೂ ಹಕ್ಕುಪತ್ರ ನೀಡಬೇಕು. ಫಾರಂ–57, ಅರ್ಜಿ ಸಲ್ಲಿಸಲು ಮತ್ತೆ ಅವಕಾಶ ನೀಡಬೇಕು. ಉಚ್ಚ ನ್ಯಾಯಾಲಯ ಹಾಗೂ ಸರ್ವೋಚ್ಚ ನ್ಯಾಯಾಲಯಗಳ ನ್ಯಾಯಾಧೀಶರುಗಳ ನೇಮಕಾತಿಯಲ್ಲಿ ಮೀಸಲಾತಿಯನ್ನು ಅನುಸರಿಸುವುದಕ್ಕೆ ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದು.ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಬರುವ ಎಲ್ಲಾ ನಿಗಮ ಮಂಡಳಿಗಳಿಗೆ ಸಾಲಕ್ಕಾಗಿ ಅರ್ಜಿ ಸಲ್ಲಿಸುವ ಎಸ್.ಸಿ/ಎಸ್.ಟಿ ಯ ಎಲ್ಲಾ ಅರ್ಹ ಫಲಾನುಭವಿಗಳಿಗೆ ಸಾಲ ಮಂಜೂರು ಮಾಡಬೇಕು. ಭೂ ಒಡೆತನ ಯೋಜನೆಗೆ ಹಣ ಮೀಸಲಿಡಬೇಕು. ವಿವಿಧ ವಸತಿ ಯೋಜನೆಯಡಿ ಅರ್ಹ ಬಡ ಫಲಾನುಭವಿಗಳಿಗೆ ಮನೆ ಮಂಜೂರು ಮಾಡಬೇಕು ಹಾಗೂ ಸಹಾಯ ಧನವನ್ನು

5 ಲಕ್ಷ ರೂ. ಗಳಿಗೆ ಹೆಚ್ಚಿಸಬೇಕು. ನಿರಾಶ್ರಿತರಿಗೆ ನಿವೇಶನ ಮತ್ತು ಹಕ್ಕು ಪತ್ರ ನೀಡಿ ದಾಖಲೆ ಇಡಬೇಕು. ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ 2020, ಈ ಕೂಡಲೇ ರದ್ದು ಮಾಡಬೇಕು. ಎಸ್ಸಿಎಸ್ ಪಿ, ಟಿಎಸ್ ಪಿ ಹಣವನ್ನು ಬೇರೆ ಯೋಜನೆಗಳಿಗೆ ಬಳಸಬಾರದು ಹಾಗೂ ಈಗಾಗಲೇ ಬಳಸಿರುವ ಹಣವನ್ನು ವಾಪಸ್ ಎಸ್.ಸಿ/ಎಸ್.ಟಿ ಗಳ ಅಭಿವೃದ್ಧಿಗೆ ಮೀಸಲಿಡಬೇಕು. ಕೆಎಸ್ಎಫ್‌ಸಿ ಬ್ಯಾಂಕ್‌ಗಳಿಂದ ದಲಿತರಿಗೆ ಶೇ. 4 ಬಡ್ಡಿಯಲ್ಲಿ 10 ಕೋಟಿ ರೂ.ವರೆಗೆ ಉದ್ಯಮ ನಡೆಸಲು ಸಾಲ ಸೌಲಭ್ಯ ನೀಡುವ ಯೋಜನೆಯಲ್ಲಿರುವ ಷರತ್ತುಗಳನ್ನು ಸಡಿಲಪಡಿಸಿ ನಗರ ಪ್ರದೇಶದಲ್ಲಿ ನಿವೇಶನ, ಮನೆ ಇತರೆ ಚರಾಸ್ಥಿಗಳ ಕೋಲ್ಯಾಟರಲ್ ಇರಬೇಕು ಎಂಬ ನಿಯಮ ಸಡಿಲಪಡಿಸಬೇಕು. ಈ ಮೇಲ್ಕಂಡ ಹಕ್ಕೊತ್ತಾಯಗಳನ್ನು ಈ ಕೂಡಲೇ ಈಡೇರಿಸಬೇಕೆಂದು ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಲಕ್ಷ್ಮಿನಾರಾಯಣ ನಾಗವಾರ ಸ್ಥಾಪಿತ) ಚಾಮರಾಜನಗರ ಜಿಲ್ಲಾ ಶಾಖೆಯ ಸಂಘಟನಾ ಸಂಚಾಲಕ ಕಂದಹಳ್ಳಿ ನಾರಾಯಣ್ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಭಾಗ್ಯಲಕ್ಷ್ಮೀ, ಮಲ್ಲರಾಜು, ಶಂಕರಮೂರ್ತಿ, ಆಟೋ ರಂಗಸ್ವಾಮಿ, ರಾಜಮ್ಮ, ಶಾಂತಮ್ಮ, ಕೆ.ಸಿ.ನಾಗರಾಜು, ದುಂಡಯ್ಯ, ಕಂದಹಳ್ಳಿ ಸೋಮಣ್ಣ, ಉಮೇಶ್ವರಿ, ನಾಗಮ್ಮ, ಮಹೇಶ್, ಸೋಮಣ್ಣ ಹೊನ್ನೂರು, ಕೆಂಪರಾಜು ಇತರರು ಹಾಜರಿದ್ದರು.

# ಆರೋಗ್ಯ ಸೇವೆಯಲ್ಲಿ ವ್ಯತ್ಯಯ ಆಗಬಾರದು: ಡಾ ಕುಮಾರ



**ಮಂಡ್ಯ :** ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ಸರ್ಕಾರಿ ವೈದ್ಯಾಧಿಕಾರಿಗಳ ಸಂಘವು ರಾಜ್ಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಮಾರ್ಚ್ 11ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ಹಿನ್ನೆಲೆಯಲ್ಲಿ ಅಂದು ಯಾವುದೇ ಆರೋಗ್ಯ ಸೇವೆಯಲ್ಲಿ ವ್ಯತ್ಯಯ ಉಂಟಾಗಬಾರದು ಎಂದು ಜಿಲ್ಲಾಧಿಕಾರಿ ಡಾ. ಕುಮಾರ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಬುಧವಾರ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು ಇಲಾಖೆಯ ವೈದ್ಯರು ಹಾಗೂ ಸಿಬ್ಬಂದಿ ಸಾರ್ವಜನಿಕ ಆರೋಗ್ಯ ಸೇವೆಯ ನಿರಂತರತೆ ಮತ್ತು ರೋಗಿಗಳ ಆರೋಗ್ಯ ಕಾಪಾಡುವ ಮಹತ್ವದ ಜವಾಬ್ದಾರಿ ಹೊಂದಿದ್ದಾರೆ. ಈ ಸಂಬಂಧ ಸಾರ್ವಜನಿಕರಿಗೆ ವ?ದ್ಯಕೀಯ ಸೇವೆಯಲ್ಲಿ ತೊಂದರೆ ಆಗಬಾರದು ಎಂದು ಹೇಳಿದರು.

ಗರ್ಭಿಣಿಯರು, ಶಿಶುಗಳು, ವೃದ್ಧರು ಹಾಗೂ ಗಂಭೀರ ರೋಗಿಗಳಿಗೆ ಆದ್ಯತೆ ನೀಡಿ ಚಿಕಿತ್ಸೆ ನೀಡಬೇಕು ಮತ್ತು ಡಯಾಲಿಸಿಸ್, ಪ್ರಸೂತಿ, ಐಸಿಯು ಹಾಗೂ ಜೀವ ರಕ್ಷಕ ಸೇವೆಗಳು ನಿರಂತರವಾಗಿ ಲಭ್ಯವಿರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

108 ಆಂಬುಲೆನ್ಸ್ ಸೇವೆ ಹಾಗೂ ರೆಫರಲ್ ವ್ಯವಸ್ಥೆ ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಕ್ರಮವಹಿಸಬೇಕು ಮತ್ತು ತಾಲ್ಲೂಕು ಮಟ್ಟದಲ್ಲಿ ಕರ್ತವ್ಯ ವೈದ್ಯರನ್ನು ನಿಯೋಜಿಸಿ ಹಾಜರಾತಿ ಕಡ್ಡಾಯಗೊಳಿಸಬೇಕು ಎಂದು ಹೇಳಿದರು.

ಅಗತ್ಯವಿದ್ದಲ್ಲಿ ತಾತ್ಕಾಲಿಕವಾಗಿ ಹೆಚ್ಚುವರಿ ವೈದ್ಯರನ್ನು ನಿಯೋಜಿಸಿ ಖಾಸಗಿ ಆಸ್ಪತ್ರೆಗಳೊಂದಿಗೆ ಸಮನ್ವಯ ಸಾಧಿಸಿ ತುರ್ತು ಸಂದರ್ಭಗಳಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಔಷಧಿ ಮತ್ತು ಉಪಕರಣಗಳ ಲಭ್ಯತೆ ಕುರಿತು ದೈನಂದಿನ ಪರಿಶೀಲನೆ ನಡೆಸಬೇಕು ಮತ್ತು ಆಸ್ಪತ್ರೆಗಳಲ್ಲಿ ಸಹಾಯ ಕೌಂಟರ್ ವ್ಯವಸ್ಥೆ ಸಕ್ರಿಯಗೊಳಿಸಬೇಕು ಎಂದು ತಿಳಿಸಿದರು.

ಯಾವುದೇ ತುರ್ತು ಪರಿಸ್ಥಿತಿ ಉಂಟಾದಲ್ಲಿ ತಕ್ಷಣ ಜಿಲ್ಲಾಡಳಿತದ ಗಮನಕ್ಕೆ ತರಬೇಕು.ಸಂಘಟನೆಗಳ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುತ್ತದೆ.

ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ, ಸಂಧಾನ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಲು ಸಂಘಟನೆಗಳು ಸಹಕರಿಸಬೇಕು ಎಂದು ಹೇಳಿದರು.

ಸಾರ್ವಜನಿಕರ ಆರೋಗ್ಯದ ಹಿತದೃಷ್ಟಿಯಿಂದ ಯಾವುದೇ ರೀತಿಯ ಮುಷ್ಕರಕ್ಕೆ ಮುಂದಾಗದೆ. ಆರೋಗ್ಯ ಸೇವೆಯನ್ನು ನಿರಂತರವಾಗಿ ನೀಡುವಂತೆ ಸಂಘಟನೆಗಳ ಪ್ರತಿನಿಧಿಗಳಿಗೆ ತಿಳಿಸಿ. "ಜನಾರೋಗ್ಯ ಸೇವೆ ಅತ್ಯಂತ ಪ್ರಾಮುಖ್ಯತೆಯದ್ದು ರೋಗಿಗಳಿಗೆ ಯಾವುದೇ ತೊಂದರೆ ಉಂಟಾಗದಂತೆ ಕರ್ತವ್ಯ ನಿರ್ವಹಿಸುವುದು ಜವಾಬ್ದಾರಿಯಾಗಿದೆ" ಎಂದು ಸೂಚಿಸಿದರು.

ಸಭೆಯಲ್ಲಿ ಸರ್ಕಾರಿ ವೈದ್ಯಕಾರಿ ವೈದ್ಯಾಧಿಕಾರಿ ಸಂಘ ಜಿಲ್ಲಾಧ್ಯಕ್ಷರು ಡಾ. ಸಾಗರ್ ಕೆ.ಎಸ್, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರ ಸಂಘದ ಜಿಲ್ಲಾಧ್ಯಕ್ಷ ಆರ್.ಶ್ರೀನಿವಾಸ್, ಸರ್ಕಾರಿ ವೈದ್ಯಾಧಿಕಾರಿಗಳ ಸಂಘದ ಕಾರ್ಯದರ್ಶಿಯಾದ ಡಾ. ಶ್ರೀನಿವಾಸ ರೆಡ್ಡಿ, ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯ ನೌಕರ ಸಂಘದ ಪ್ರಧಾನ ಕಾರ್ಯದರ್ಶಿ ರವಿ ಎಚ್.ಎಂ,ಜಿಲ್ಲಾ ಸರ್ಕಾರ ನೌಕರ ಸಂಘದ ಅಧ್ಯಕರು ಕೆ. ನಾಗೇಶ್, ವೈದ್ಯಕೀಯ ಅಧಿಕಾರಿಗಳಾದ ಡಿ. ಹೆಚ್. ಓ.ಡಾ. ಕೆ ಮೋಹನ್, ಡಾ. ಶಿಲ್ಪಾ ಉಪಸ್ಥಿತರಿದ್ದರು.

# ಹಿಂದೂ ಸಂಸ್ಕೃತಿ ಪ್ರಾಚೀನ ವಾದದ್ದು: ಬಿ. ಸಿ.ಶಿವಾನಂದ ಮೂರ್ತಿ



**ಮಂಡ್ಯ:** ನಮ್ಮ ದೇಶ,ನಮ್ಮ ಸಂಸ್ಕೃತಿಗೆ ನಮ್ಮದೇ ಯಾದ ಇತಿಹಾಸವಿದೆ. ನಮ್ಮ ಸಂಸ್ಕೃತಿಯನ್ನು ಬೆಳೆಸಿ ಉಳಿಸಿಕೊಳ್ಳಬೇಕು ಮತ್ತು ಯುವ ಜನತೆಯು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿಗಳಾದ ಬಿ. ಸಿ. ಶಿವಾನಂದ ಮೂರ್ತಿ ರವರು ಹೇಳಿದರು.

ಇಂದು ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದೊಂದಿಗೆ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕ್ರಮವನ್ನು ಮಂಡ್ಯ ಗಾಂಧಿ ಭವನದಲ್ಲಿ ಅಧ್ಯಕತೆ ವಹಿಸಿ ಮಾತನಾಡಿ ದೇಶದ ಜನಸಂಖ್ಯೆಗಿಂತಲೂ ಮಿಗಿಲಾಗಿ ದೇಶದಲ್ಲಿ ಸಮೃದ್ಧಿ ಮತ್ತು ಸಂಪನ್ಮೂಲಗಳು ಇದ್ದು ಯುವಜನತೆಯು ಸಂಪನ್ಮೂಲಗಳನ್ನು ಮಿತವಾಗಿ ಬಳಕೆ ಮಾಡಬೇಕು.ನಮ್ಮ ದೇಶ ತಂತ್ರಜ್ಞಾನ ಬಳಕೆಯಲ್ಲಿ ಮುಂದುವರೆದ ದೇಶವಾಗಿದೆ ಎಂಬುದು ಹೆಮ್ಮೆಯ ವಿಷಯ ಎಂದು ಹೇಳಿದರು.

ಅವಮಾನಿತ ವರ್ಗಗಳನ್ನು ಪ್ರೀತಿಸಿ, ಅವರಿಗೆ ತತ್ವಶಾಸ್ತ್ರದ ಮತ್ತು ಧಾರ್ಮಿಕ ಶಿಕ್ಷಣವನ್ನು ನೀಡಿದರು."ಸಮಾನತೆ" ಎಂಬ ತತ್ವಕ್ಕೆ ಮಹತ್ವ ನೀಡಿದರು, ಅದರಲ್ಲಿ ಎಲ್ಲಾ ವರ್ಣಗಳೂ ಸಮಾನವೆಂಬ ನಂಬಿಕೆಯನ್ನು ಹರಡಿದರು ಎಂದು ಹೇಳಿದರು.

ರೇಣುಕಾಚಾರ್ಯರು ವಚನಗಳ ಮೂಲಕ ತಮ್ಮ ತತ್ತ್ವಗಳನ್ನು ಜನರಿಗೆ ತಿಳಿಸಿಕೊಟ್ಟರು. ಅವರ ವಚನಗಳು ಜನರಿಗೆ ಶ್ರಮ, ಭಕ್ತಿ, ನೈತಿಕತೆ ಮತ್ತು ಸಮಾನತೆ ಎಂಬ ತತ್ತ್ವಗಳನ್ನು ಪರಿಚಯಿಸಿವೆ ಎಂದು ತಿಳಿಸಿದರು

ನಮ್ಮ ದೇಶದಲ್ಲಿ ಪ್ರಾಚೀನ ಕಾಲ ಘಟ್ಟದಲ್ಲಿ ಪುಷ್ಪಕ ವಿಮಾನವನ್ನು ನಿರ್ಮಾಣ ಮಾಡಲಾಗಿದ್ದು, ಖಗೋಳಶಾಸ್ತ್ರದ ಮೂಲಕ ದಿಕ್ಕುಗಳು,ನಕ್ಷತ್ರಗಳು, ಹುಣ್ಣಿಮೆ,ಅಮಾವಾಸ್ಯೆ, ಹಿಂದೂ ಸಂಸ್ಕೃತಿಯನ್ನು ಪ್ರಪಂಚಕ್ಕೆ ತಿಳಿಸಿಕೊಟ್ಟ ದೇಶ ನಮ್ಮದು ಎಂದು ಹೇಳಿದರು.

ತುಮಕೂರಿನ ಚಿಕ್ಕಪೇಟೆ ಹಿರೇಮಠ ಡಾ.ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿಗಳು ಮಾತನಾಡಿ ಮಾನವ ಧರ್ಮಕ್ಕೆ ಜಯವಾಗಲಿ ಧರ್ಮದಿಂದಲೇ ವಿಶ್ವಕ್ಕೆ ಶಾಂತಿ ಎಂಬ ಘೋಷವಾಕ್ಯವನ್ನು ಬೋಧಿಸಿದರು. ಮುಂದಿನ ದಿನಗಳಲ್ಲಿ ಮಂಡ್ಯ ಸಕ್ಕರೆಗೆ ಹೆಸರುವಾಸಿ ಯಾಗಿರುವುದರಿಂದ ಮಂಡ್ಯವನ್ನು ಸಕ್ಕರೆ ಕಾಶಿ ಎಂದು ನಾಮಕರಣ ಮಾಡಬೇಕು ಎಂದು ಅಭಿಪ್ರಾಯಪಟ್ಟರು.

ಶ್ರೀ ರಂಗಪಟ್ಟಣದ ಶ್ರೀ ದುರ್ದಂಡೇಶ್ವರ ಮಹಂತ ಶಿವಯೋಗಿಗಳ ಮಠ ಬೇಬಿ ಗ್ರಾಮದ ಮತ್ತು ಚಂದನವನ ಡಾ. ತ್ರಿನೇತ್ರ ಮಹಂತ ಶಿವಯೋಗಿಸ್ವಾಮಿಗಳು ಮಾತನಾಡಿ ಜಗದ್ಗುರು ರೇಣುಕಾಚಾರ್ಯರು ವೀರಶೈವ ಧರ್ಮದ ಮಹಾನ್ ಶರಣ ಮತ್ತು ಗುರುಗಳಲ್ಲಿ ಒಬ್ಬರು. ಇವರ ತತ್ವ, ಬದುಕಿನ ಚರಿತ್ರೆ, ಮತ್ತು ಧಾರ್ಮಿಕ ಸಾಧನೆಗಳು ಭಾರತೀಯ ಸಾಮಾಜಿಕ ಮತ್ತು ಧಾರ್ಮಿಕ ಚರಿತ್ರೆಯಲ್ಲಿ ಮಹತ್ವಪೂರ್ಣ ಸ್ಥಾನವನ್ನು ಪಡೆದಿವೆ ಎಂದು ಹೇಳಿದರು.

# ತೆರಿಗೆ ವಸೂಲಾತಿಯಲ್ಲಿ ಶೇಕಡ 100ರಷ್ಟು ಪ್ರಗತಿ ಸಾಧಿಸಿ: ಕೆ.ಆರ್ ನಂದಿನಿ



**ಮಂಡ್ಯ :** ಮಾರ್ಚ್ 15 ರೊಳಗೆ ತೆರಿಗೆ ವಸೂಲಾತಿಯಲ್ಲಿ ಶೇ. 100 ರಷ್ಟು ಪ್ರಗತಿ ಸಾಧಿಸಬೇಕು ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿ ಹಾಗೂ ಸಿಬ್ಬಂದಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು ಎಂದು ಜಿ.ಪಂ.ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ಆರ್ ನಂದಿನಿ ರವರು ತಿಳಿಸಿದರು.

ಮಂಗಳವಾರ ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆಯ ವಹಿಸಿ ಮಾತನಾಡಿದ ಅವರು ತೆರಿಗೆ ವಸೂಲಾತಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು ಗುರಿ ನಿಗದಿಪಡಿಸಿದ್ದು ಗುರಿಗೆ ಅನುಗುಣವಾಗಿ ಪ್ರಗತಿ ಸಾಧಿಸುವಂತೆ ಎಚ್ಚರಿಕೆ ನೀಡಿದರು. ಶೇ. 70 ಕ್ಕಿಂತ ಕಡಿಮೆ ತೆರಿಗೆ ವಸೂಲಾತಿ ಮಾಡಿರುವ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಎಚ್ಚರಿಕೆ ನೀಡಿ ಮುಂದಿನ ಸಭೆಯೊಳಗೆ ಪ್ರಗತಿ ಸಾಧಿಸಲು ಸೂಚಿಸಿದರು.

ಪ್ರತಿದಿನ ಮನೆ ಮನೆ ಭೇಟಿ ಮಾಡಿ ತೆರಿಗೆ ವಸೂಲತಿ ಮಾಡಲು ಕ್ರಮವಹಿಸಬೇಕು ಎಂದರು. ಶೇ.100 ರಷ್ಟು ತೆರಿಗೆ ವಸೂಲಾತಿ ಮಾಡಿರುವ ಪಾಂಡವಪುರ ತಾಲ್ಲೂಕು ಪಂಚಾಯಿತಿಯ ಕಾರ್ಯ ನಿರ್ವಾಹಕ ಅಧಿಕಾರಿ ಹಾಗೂ ಗ್ರಾಮ ಪಂಚಾಯತ್ ಗಳ ಸಿಬ್ಬಂದಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

ಇ-ಕೆವೈಸಿ- ಕಡಿಮೆ ಪ್ರಗತಿ ಸಾಧಿಸಿರುವ ಹಾಗೂ ನರೇಗಾ ಯೋಜನೆಯ ಕೂಲಿಕಾರರಿಗೆ ಇ-ಕೆವೈಸಿ ಕಡ್ಡಾಯವಾಗಿದ್ದು , ತಾಂತ್ರಿಕ ಸಮಸ್ಯೆ ಇರುವ ಫಲಾನುಭವಿಗಳ ವಿವರವನ್ನು ಸಂಬಂಧಪಟ್ಟ ಅಧಿಕಾರಿರರಿಗೆ ಗಮನಕ್ಕೆ ತಂದು ಇ ಕೆವೈಸಿ ಪೂರ್ಣಗೊಳಿಸಲು ತಿಳಿಸಿದರು.

ರಾಜಧನ ಪಾವತಿಗೆ ಸಂಬಂದಿಸಿದ ಪ್ರಕರಣಗಳ ತೀರುವಳಿಗೆ ಕ್ರಮವಹಿಸಿ: ಸಾಮಾಜಿಕ ಪರಿಶೋಧನಾ ವರದಿಯಲ್ಲಿ ಬಿಂಬಿತವಾದ ರಾಜಧನ ಪಾವತಿ ಮಾಡಿಲ್ಲದ ಪ್ರಕರಣಗಳಿಗೆ ಸಂಬಂಧಿಸಿದಂತೆ, ಪ್ರತಿದಿನ ಅಡಾಕ್ ಸಮಿತಿ ಸಭೆಯನ್ನು ಆಯೋಜಿಸಿ ಬಾಕಿ ಇರುವ ಸಾಮಾಜಿಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣಾ ಪ್ರಕರಣಗಳನ್ನು ಎಲ್ಲಾ ಪ್ರಕರಣಗಳನ್ನು ತೀರುವಳಿಗೊಳಿಸಲು ಸೂಕ್ತ ಕ್ರಮವಹಿಸುವಂತೆ ತಿಳಿಸಿದರು.

ಅಭಿಯಾನ ಮಾದರಿಯಲ್ಲಿ ಸ್ಥಳೀಯ ಲೆಕ್ಕ ಪರಿಶೋಧನಾ ಕಂಡಿಕೆಗಳನ್ನು ತೀರುವಳಿ ಮಾಡಿ: 100 ದಿನಗಳ ಅಭಿಯಾನದ ಆಯೋಜಿಸಿ ಕಂಡಿಕೆಗಳನ್ನು ತೀರುವಳಿ ಮಾಡಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ತಿಳಿಸಿದರು.

ಖಾಲಿ ಇರುವ ಗ್ರಾಮ ಪಂಚಾಯತಿ ಸಿಬ್ಬಂದಿಗಳ ನೇಮಕಾತಿಗೆ ಸಂಬಂಧಿಸಿದಂತೆ ಸರ್ಕಾರದ ನಿರ್ದೇಶನದನ್ವಯ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು ಮತ್ತು ಗ್ರಂಥಾಲಯ ಮೇಲ್ವಿಚಾರಕರಿಗೆ ವ್ಯತ್ಯಾಸ ಭತ್ಯೆ ಪಾವತಿಸುವ ಸಂಬಂಧ ನಿಗದಿಪಡಿಸಿರುವ ಗುರಿಗೆ ಅನುಗುಣವಾಗಿ ಗ್ರಂಥಾಲಯ ಕರ ಪಾವತಿಸಿರುವ ಬಗ್ಗೆ ವರದಿಯನ್ನು ಜಿಲ್ಲಾ ಪಂಚಾಯತ್ ಗೆ ಸಲ್ಲಿಸಲು ಸೂಚಿಸಿದರು.

ಗ್ರಾಮ ಪಂಚಾಯತಿ ಸಿಬ್ಬಂದಿಗಳಿಗೆ ಬಾಕಿ ನೀಡಬೇಕಾಗಿರುವ ವೇತನವನ್ನು 15 ದಿನಗಳೊಳಗಾಗಿ ಪಾವತಿಸುವಂತೆ ಸೂಚಿಸಿದರು ಹಾಗೂ ತಂತ್ರಾಂಶದಲ್ಲಿ ಬಾಕಿ ಇರುವ ವೇತನ ಪಾವತಿ ಬಗ್ಗೆ ತಾಲ್ಲೂಕು ಪಂಚಾಯತ್ ನಿಂದ ಸೂಕ್ತ ಸಮಜಾಯಿಷಿಯೊಂದಿಗೆ ದೃಢೀಕರಣ ಸಲ್ಲಿಸಲು ತಿಳಿಸಿದರು.

ವೈಯಕ್ತಿಕ ಗೃಹ ಶೌಚಾಲಯಗಳ ಬಾಕಿ ಇರುವ ಜಿಯೋ ಟ್ಯಾಗ್ ಗಳನ್ನು ಪೂರ್ಣಗೊಳಿಸುವುದು ಹಾಗೂ ಪ್ರೋತ್ಸಾಹ ಧನ ಪಾವತಿಸಲು ಕ್ರಮವಹಿಸುವುದು. ಶುದ್ಧ ಕುಡಿಯುವ ನೀರಿನ ಘಟಕದ ದುರಸ್ಥಿ ಗೆ ಸಂಬಂಧಿಸಿದಂತೆ ಪ್ರಸ್ತಾವನೆಯನ್ನು ನಾಳೆಯೊಳಗೆ ಜಿಲ್ಲಾ ಪಂಚಾಯಿತಿಗೆ ಸಲ್ಲಿಸಲು ತಿಳಿಸಿದರು. ಕೊಳವೆ ಬಾವಿ ರಕ್ಷಣಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ ಕೆ.ಆರ್ ಪೇಟೆ, ಮಳವಳ್ಳಿ, ಪಾಂಡವಪುರ, ಮಂಡ್ಯ, ಶ್ರೀರಂಗಪಟ್ಟಣ ತಾಲ್ಲೂಕು ಪಂಚಾಯಿತಿರವರಿಗೆ ಅಭಿನಂದನೆ ಸಲ್ಲಿಸಿದರು.

ಸಭೆಯಲ್ಲಿ ಉಪಕಾರ್ಯದರ್ಶಿ(ಆಡಳಿತ) ಶಿವಲಿಂಗಯ್ಯ, ಲೆಕ್ಕಾಧಿಕಾರಿಗಳಾದ ಜ್ಯೋತಿ, ಸಹಾಯಕ ಕಾರ್ಯದರ್ಶಿ(ಆಡಳಿತ) ರವೀಂದ್ರ, ಸಹಾಯಕ ಯೋಜನಾಧಿಕಾರಿ (ಡಿ.ಆರ್.ಡಿ.ಎ) ಶ್ರೀಹರ್ಷ ಹಾಗೂ ಜಿಲ್ಲಾ ಪಂಚಾಯಿತಿ ಸಿಬ್ಬಂದಿಗಳು ಹಾಜರಿದ್ದರು.

# ಮಾದಿಗ ಸಮುದಾಯಕ್ಕೆ ಒಳಮೀಸಲಾತಿ ನೀಡಿ



**ಮಂಡ್ಯ:** ಮೀಸಲಾತಿಗೆ ಸಂಬಂಧಿಸಿ ಂದತೆ ಹಳೆಯ ಪದ್ಧತಿಯಲ್ಲಿ ಶೇ.50 ರಷ್ಟು 2022 ರಂತೆ ಒಳ ಮೀಸಲಾತಿ ಇರಬೇಕು ಎಂದು ಮಾದಿಗ ಒಳಮಿಸಲಾತಿ ಹೋರಾಟ ಸಮಿತಿಯ ಅಧ್ಯಕ್ಷ ಸಿ.ಕೆ.ಪಾಪಯ್ಯ ಮನವಿ ಮಾಡಿದರು.

ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಮಾದಿಗ ಒಳಮೀಸಲಾತಿ ಹೋರಾಟ ಸಮಿತಿ ಸಭೆಯಲ್ಲಿ ಭಾಗವಹಿಸಿ ಮಾತನಾಡಿದರು. 2022ರ ನೇಮಕಾತಿಯಲ್ಲಿ ಒಳಮೀಸಲಾತಿ ಅನ್ವಯಿಸಲ್ಲ ಎಂದು ಹೇಳಲಾಗಿದೆ. ಹಾಗಾಗಿ ಇದು ತಪ್ಪು, ನಮಗೂ ಒಳಮಿಸಲಾತಿಕೊಟ್ಟು ನೇಮಕ ಮಾಡಿಕೊಳ್ಳಬೇಕು. ಇಲ್ಲವಾದರೆ ಸಮಾಜಕ್ಕೆ ಅನ್ಯಾಯ ಆಗುತ್ತದೆ ಎಂದು ಆತಂಕ ಪಟ್ಟರು. ಸರ್ಕಾರವು ಯಾವುದೇ ಕಾರಣಕ್ಕೂ ಒಳಮೀಸಲಾತಿ ಕೊಡುವ ನಿಟ್ಟಿನಲ್ಲಿ ಮೀನಾಮೇಷ ಎಣಿಸಬಾರದು. ಹೈಕೋರ್ಟ್‌ನಲ್ಲಿಯೂ ಕೂಡ ಒಳಮಿಸಲಾತಿ ಬಗ್ಗೆ ಅರ್ಜಿ ಹಾಕಿಕೊಳ್ಳಲಾಗಿದೆ. ನೇಮಕಾತಿ ಮಾಡಬಾರದು ಎಂದು ಹೇಳಿಲ್ಲ, ಶೇ.50 ರಷ್ಟು ಮೀಸಲಾತಿ ಗಣನೆಗೆ ತೆಗೆದುಕೊಂಡು ಮಾಡಿ ಎಂದು ಹೇಳಲಾಗಿದೆ ಎಂದು ವಿವರಿಸಿದರು.

## ಇಂದು ವಿದ್ಯುತ್ ವ್ಯತ್ಯಯ

**ತುಮಕೂರು:** ಬೆಸ್ಕಾಂ ಶಿರಾ ನಗರ ಉಪವಿಭಾಗ ವ್ಯಾಪ್ತಿಯ ಘಟಕ-01ರಲ್ಲಿ ದುರಸ್ತಿ ಕಾಮಗಾರಿ ಕೈಗೊಂಡಿರುವುದರಿಂದ ಮಾರ್ಚ್ 5ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆವರೆಗೆ ಚಿಕ್ಕೆರೆ ಹಿಂಭಾಗ, ಲಾಡ್‌ಪುರ, ಬನ್ನಿನಗರ, ಭವಾನಿನಗರ, ಕೋಟೆ, ಶಿರಾನಿ ಮೋಹಲ್ಲಾ, ಪಾರ್ಕ ಮೋಹಲ್ಲಾ, ಚನ್ನನಕುಂಟೆರಸ್ತೆ, ಸೊಪ್ಪಿನಹಟ್ಟಿ, ಶಿರಾ ಸುತ್ತಮುತ್ತಲಿನ ಪ್ರದೇಶ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

## ಮಾ. 6 ರಿಂದ ಜನ ಸಂಪರ್ಕ ಸಭೆ

**ತುಮಕೂರು:** ಜಿಲ್ಲೆಯಲ್ಲಿ ನಾಗರೀಕರಿಂದ ಅಹವಾಲುಗಳನ್ನು ಸ್ವೀಕರಿಸಿ/ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ಒದಗಿಸಲು ಮಾರ್ಚ್ 6 ರಿಂದ 26ರವರೆಗೆ ವಿವಿಧ ತಾಲ್ಲೂಕುಗಳಲ್ಲಿ ಜನ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಮಾರ್ಚ್ 6 ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಗುಬ್ಬಿ ತಾಲ್ಲೂಕು ಕಸಬಾ ಹೋಬಳಿ ತಾಲ್ಲೂಕು ಕಚೇರಿ ಸಭಾಂಗಣ; ಮಾ. 12ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಶಿರಾ ತಾಲ್ಲೂಕು ಹುಲಿಕುಂಟೆ ಹೋಬಳಿ ಬರಗೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ ತಾಲ್ಲೂಕು ಕಚೇರಿ ಸಭಾಂಗಣ; ಮಾ. 13ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕೊರಟಗೆರೆ ತಾಲ್ಲೂಕು ಕಸಬಾ ಹೋಬಳಿಯ ತಾಲ್ಲೂಕು ಕಚೇರಿ ಸಭಾಂಗಣ; ಮಾ. 16ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಧುಗಿರಿ ತಾಲ್ಲೂಕು ಕಸಬಾ ಹೋಬಳಿ ತಾಲ್ಲೂಕು ಕಚೇರಿ ಸಭಾಂಗಣ; ಮಾ. 17ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಹಂದನಕೆರೆ ಹೋಬಳಿ ಮತ್ತಿಘಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ ತಾಲ್ಲೂಕು ಕಚೇರಿ ಸಭಾಂಗಣ; ಮಾ. 18ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಕುಣಿಗಲ್ ತಾಲ್ಲೂಕು ಹುತ್ರಿದುರ್ಗ ಹೋಬಳಿ ಹುತ್ರಿದುರ್ಗ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ ತಾಲ್ಲೂಕು ಕಚೇರಿ ಸಭಾಂಗಣ; ಮಾ.24ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ತುರುವೇಕೆರೆ ತಾಲ್ಲೂಕು ದಬ್ಬೇಘಟ್ಟ ಹೋಬಳಿಯ ಮಾವಿನಕೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ ತಾಲ್ಲೂಕು ಕಚೇರಿ ಸಭಾಂಗಣ; ಮಾ. 25ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ತಿಪಟೂರು ತಾಲ್ಲೂಕು ಕಿಬ್ಬನಹಳ್ಳಿ ಹೋಬಳಿಯ ಬಿಳಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ ತಾಲ್ಲೂಕು ಕಚೇರಿ ಸಭಾಂಗಣ; ಮಾ. 26ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಪಾವಗಡ ತಾಲ್ಲೂಕು ನಿಡಗಲ್ ಹೋಬಳಿ ಚೆನ್ನಕೇಶವಪುರದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಮಧ್ಯಾಹ್ನ 2.30 ರಿಂದ ಸಂಜೆ 5.30 ಗಂಟೆಯವರೆಗೆ ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಜನ ಸಂಪರ್ಕ ಸಭೆಯನ್ನು ಏರ್ಪಡಿಸಲಾಗಿದೆ.

ಸದರಿ ಜನ ಸಂಪರ್ಕ ಸಭೆಗಳಲ್ಲಿ ಆಯಾ ತಾಲ್ಲೂಕಿನ ಸಾರ್ವಜನಿಕರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಪರಿಹಾರವನ್ನು ಪಡೆಯಬಹುದಾಗಿದೆ ಎಂದು ಅವರು ಮನವಿ ಮಾಡಿದ್ದಾರೆ.

### ಕಂದಾಯ ಸೇವೆಗಳ ಗ್ಯಾರಂಟಿ ಸಮರ್ಪಣಾ ಸಮಾವೇಶ; ಜಿಲ್ಲೆಯಲ್ಲಿ 4238 ಪೋಡಿ ಪ್ರಕರಣ ದುರಸ್ತಿ

# ಮುಂದಿನ ಎರಡು ವರ್ಷಗಳಲ್ಲಿ ಐದು ಲಕ್ಷ ಕುಟುಂಬಗಳಿಗೆ ಪೋಡಿ ಮಾಡುವ ಗುರಿ: ಸಚಿವ ಕೃಷ್ಣ ಬೈರೇಗೌಡ

**ಬೆಂ.ಗ್ರಾ. ಜಿಲ್ಲೆ:** ಪ್ರಸ್ತುತ ರಾಜ್ಯದಲ್ಲಿ 2 ಲಕ್ಷ 6000 ಪೋಡಿ ಪ್ರಕರಣಗಳ ದುರಸ್ತಿ ಮಾಡಲಾಗಿದ್ದು ಮುಂದಿನ ಎರಡು 5 ಲಕ್ಷ ಪೋಡಿ ದುರಸ್ತಿ ಮಾಡುವ ಗುರಿ ಹೊಂದಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಹೇಳಿದರು.

ಹೊಸಕೋಟೆ ಟೌನ್ ನ ಚನ್ನಬೈರೇಗೌಡ ಕ್ರೀಡಾಂಗಣದಲ್ಲಿ ನಡೆದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಂದಾಯ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಅವರು ಮಾತನಾಡಿ ನಮ್ಮ ಸರ್ಕಾರ ಬಂದು ಒಂದು ಸಾವಿರ ದಿನಗಳು ಪೂರೈಸಿದೆ. ಸರ್ಕಾರದ ಸಾವಿರ ದಿನಗಳ ಕೆಲಸ ಸಮರ್ಪಣೆ ಮಾಡುವುದು ನಮ್ಮ ಉದ್ದೇಶ. ನಾವು ಏನು ಕೆಲಸ ಮಾಡಿದಿವಿ ಅದನ್ನು ನಿಮಗೆ ತೋರಿಸಬೇಕು ಎನ್ನುವ ಉದ್ದೇಶದಿಂದ ಸಮರ್ಪಣಾ ಸಮಾವೇಶ ಹಮ್ಮಿಕೊಳ್ಳಲಾಗಿದೆ.

ಇಂದಿರಾಗಾಂಧಿ, ದೇವರಾಜ ಅರಸು ಕಾಲದಲ್ಲಿ ಜಮೀನುಗಳು ರೈತರಿಗೆ ಮಂಜೂರು ಆಗಿತ್ತು, ಮಂಜೂರಾತಿ ಆ ಜಮೀನುಗಳೀಗೆ ಪೋಡಿ, ಸ್ಕೆಚ್, ಕ್ರಯ, ಆಕಾರ್ಬಂದ್ ಆಗಿರಲಿಲ್ಲ. ದರಕಾಸ್ತು ಜಮೀನುಗಳು ಹಾಗೆ ಉಳಿದಿದ್ದವು. ದಾಖಲೆ ಇಲ್ಲ ಅಂದ್ರೆ ನೀವು ಆ ಜಮೀನು ಮೇಲೆ ಏನು ಮಾಡಕ್ಕೆ ಆಗಲ್ಲ, ಮಾಲಿಕತ್ವಕ್ಕೆ ಗ್ಯಾರಂಟಿ ಇರಲಿಲ್ಲ. ಪೋಡಿ ಮಾಡಲು ಹಿಂದಿನ ಸರ್ಕಾರಗಳು ಆಸಕ್ತಿ ತೋರಿಸಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಇಂತಹ ಸಮಸ್ಯೆಗಳು ಪರಿಹಾರ ಒದಗಿಸಲು ಸರ್ವೆ, ಪೋಡಿ ದುರಸ್ತಿ, ಸ್ಕೆಚ್, ಪಹಣಿಯೊಂದಿಗೆ ಮನೆಗೆ ಭೂ ಗ್ಯಾರಂಟಿ ತರಲಾಯಿತು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ ವರ್ಷ 1238 ಪೋಡಿ ದುರಸ್ತಿ ಆಗಿತ್ತು, ಪ್ರಸ್ತುತ 4238 ಪೋಡಿ ಪ್ರಕರಣ ದುರಸ್ತಿ ಮಾಡಲಾಗಿದೆ. ಅರ್ಜಿ ಕೊಡಿ, ಕಚೇರಿಗೆ ಬನ್ನಿ, ಮಧ್ಯವರ್ತಿಗಳ ಹಾವಳಿಗೆ ಅವಕಾಶ ನೀಡದೇ ಸ್ವಯಂ ಪ್ರೇರಿತರಾಗಿ ರೈತರ ಮನೆ ಬಾಗಿಲಿಗೆ ಪೋಡಿ ದುರಸ್ತಿ ಮಾಡಿಕೊಡಲಾಗಿದೆ. ಇದು ನಮ್ಮ ಗ್ಯಾರಂಟಿ.

ಹಿಂದೆ ಒಂದು ಪೋಡಿ ಮಾಡಿಸಲು ಅರ್ಜಿ ನೀಡಿದರೆ. ರೈತರು ಕಚೇರಿಗೆ ಸುತ್ತಿ ಸುತ್ತಿ ಆಗೊದಿಲ್ಲ ಅಂತ ಸುಮ್ಮನೆ ಆಗುತ್ತಿದ್ದರು. ಒಂದು ಎಕರೆ ಪೋಡಿ ಗೆ 5 ಲಕ್ಷ, 10 ಲಕ್ಷ, ರಸ್ತೆ ಪಕ್ಕ 15 ಲಕ್ಷ ಎಂದು ಹಲವರು ರೈತರು ಹೇಳುತ್ತಿದ್ದರು. ಮಧ್ಯವರ್ತಿಗಳ ಹಾವಳಿ ಇತ್ತು. ಈ ಎಲ್ಲಾ ಸಮಸ್ಯೆಗಳು ಪರಿಹಾರವಾಗಿ ಉಚಿತವಾಗಿ ಮಾಡಿಕೊಡಲಾಗುತ್ತಿದೆ. 1955 ರಲ್ಲಿ ಜಮೀನು ಮಂಜೂರು ಆಗಿರೋದು ಈಗ ಪೋಡಿ ಆಗಿದೆ ಎಂದು ಹೊಸಕೋಟೆ ತಹಶೀಲ್ದಾರ್ ತಿಳಿಸಿದ್ದಾರೆ. ಮಂಜೂರಾಗಿ 70 ವರ್ಷ ಆಗದಿರುವುದು ಈಗ ಆಗಿರುವುದು ನಮ್ಮ ಸರ್ಕಾರದ ಗ್ಯಾರಂಟಿ ಎಂದರು.

ಹೊಸಕೋಟೆಯಲ್ಲಿ 136 ಮನೆ ಸೇರಿ ಜಿಲ್ಲೆಯಲ್ಲಿ 240 ಮನೆಗಳಿಗೆ ಊರಿನ ದಾಖಲೆ ಇಲ್ಲ, ಕಂದಾಯ ಗ್ರಾಮಗಳೆಂದು ಘೋಷಣೆ ಆಗಿಲ್ಲ. ರಾಜ್ಯದಾದ್ಯಂತ ದಾಖಲೆ ಇಲ್ಲದ 9181 ಮನೆಗಳು ಇದಾವೆ. ಅವರೆಲ್ಲರಿಗೂ ಹಕ್ಕುಪತ್ರ ನೀಡಲಾಗುವುದು ಎಂದರು.

2,20,000 ಕುಟುಂಬಗಳಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ. ಮುಂದಿನ ದಿನಗಳಲ್ಲಿ 10000 ಮನೆಗಳಿಗೆ ಹಕ್ಕು ಪತ್ರ ನೀಡಿ ಕಂದಾಯ ಗ್ರಾಮ ಎಂದು ಘೋಷಣೆ ಮಾಡಲಿದ್ದೇವೆ. ಕ್ರಯಪತ್ರ ಇದ್ದರೆ ಪಂಚಾಯಿತಿ ಬಿ ಖಾತಾ ಹಕ್ಕು ಪತ್ರ ಪಡೆಯಬಹುದು.



49 ಲಕ್ಷ ಖಾತೆಗಳು ಮೃತರ ಹೆಸರಿನಲ್ಲಿ ಇದೆ

ರಾಜ್ಯದಲ್ಲಿ ಮೃತರ ಹೆಸರಿನಲ್ಲಿ 49 ಲಕ್ಷ ಖಾತೆಗಳಿದ್ದವು. ಪ್ರಸ್ತುತ 13 ಲಕ್ಷ ಫವತಿ ಖಾತೆ ಮಾಡಲಾಗಿದೆ. ಜಿಲ್ಲೆಯಲ್ಲಿ ಪ್ರಸ್ತುತ 14,000 ಫವತಿ ಖಾತೆ ಮಾಡಲಾಗಿದೆ. ರೈತರ ಮನೆ ಬಾಗಿಲಿಗೆ ಹೋಗಿ ವಾರಸುದಾರರಿಗೆ ಫವತಿ ಖಾತೆಮಾಡಲಾಗಿದೆ. ಈ ವರ್ಷ ರಾಜ್ಯದಲ್ಲಿ 15 ಲಕ್ಷ ಫವತಿ ಖಾತೆ ಮಾಡುವ ಗುರಿ ಹೊಂದಲಾಗಿದೆ.

ನಮ್ಮ ಸರ್ಕಾರ ಬಂದಾಗ ಆರಂಭದಲ್ಲಿ ತಹಶೀಲ್ದಾರ್, ಎಸಿ, ಡಿಸಿ ಕೋರ್ಟ್ಗಳಲ್ಲಿ ಸುಮಾರು 10,774 ಕೋರ್ಟ್ ಕೇಸ್ ಗಳಿ ಬಾಕಿ ಉಳಿದಿದ್ದವು. ಈಗ ಕೇವಲ 488 ಬಾಕಿ ಇದೆ. 99% ಬಾಕಿ ಕೇಸ್ ಗಳ ವಿಲೇವಾರಿ ಮಾಡಲಾಗಿದೆ.

ಭೂ ಸುರಕ್ಷಾ ಯೋಜನೆ:73 ಕೋಟಿ ಪುಟಗಳ ಸ್ಕ್ಯಾನ್

ಆನ್ಲೈನ್ ನಲ್ಲಿ ಈ ಆಫಿಸ್ ವ್ಯವಸ್ಥೆ ಜಾರಿಗೆ ತಂದು ಪಾರದರ್ಶಕ ಆಡಳಿತ ಸೇವೆ ನೀಡುತ್ತಿದ್ದೇವೆ. ಹಿಂದೆ ದಾಖಲೆ ಪಡೆಯಲು ಅಲೆದಾಟ, ಬೇರೆ ಮಾರ್ಗದಲ್ಲಿ ಹೋದರೆ ಬೇಗ ಸಿಗುತ್ತಿತ್ತು, ಫೈಲ್ ಗಳ ಮಿಸ್ಸಿಂಗ್, ದೇವನಹಳ್ಳಿಯಲ್ಲಿ ರೆಕಾರ್ಡ್ ರೂಂಗೆ ಬೆಂಕಿ ಹಾಕಿದ್ದರು, ತಿದ್ದುಪಡಿ, ಬೋಗಸ್, ನಕಲಿ ದಾಖಲೆ ಸೃಷ್ಟಿಸಿ ಭೂಮಿ ಖರೀದಿ ಆರೋಪ ಇವೆಲ್ಲ ಸಮಸ್ಯೆಗಳ ಪರಿಹಾರಕ್ಕೆ ಭೂ ಸುರಕ್ಷಾ ಯೋಜನೆ ಜಾರಿಗೆ ತಂದೆವು. ತಾಲ್ಲೂಕು,ಎಸಿ, ಡಿಸಿ ಆಫೀಸ್ ನಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲಾಗುತ್ತಿದೆ. ಎಲ್ಲಾ ದಾಖಲೆಗಳನ್ನು ನಿಮ್ಮ ಮೊಬೈಲ್ ನಲ್ಲಿ ಸರ್ಟಿಫೈಡ್ ಕಾಪಿಯನ್ನು ಬೆರಳ ತುದಿಯಲ್ಲಿ ಪಡೆದುಕೊಳ್ಳಬಹುದು. ಪ್ರಸ್ತುತ 73 ಕೋಟಿ ಪುಟಗಳ ಸ್ಕ್ಯಾನ್ ಮಾಡಲಾಗಿದೆ. ಈ ಯೋಜನೆಯಿಂದ ಮಧ್ಯವರ್ತಿಗಳ ಹಾವಳಿ ಇಲ್ಲ, ನಕಲಿ ದಾಖಲೆ, ಫೋರ್ಜರಿ, ತಿದ್ದುಪಡಿ, ಫೈಲ್ ಮಿಸ್ಸಿಂಗ್ ಎಲ್ಲ ಸಮಸ್ಯೆಗಳನ್ನು ಪರಿಹರಿಸಲಾಗಿದೆ.

ಕಂದಾಯ ಕೆಲಸಗಳು ಕ್ಷಿಪ್ರವಾಗಿ ನಡೆಯಲು 1219 ಲೈಸೆನ್ಸ್ ಸರ್ವೇಯರ್ ಇದ್ದಾರೆ. ಅವರಿಗೆ ರೋಬೋ ಮಿಷನರಿ ಕೊಟ್ಟು ಕೆಲಸದ ಒತ್ತಡ ಕಡಿಮೆ ಮಾಡುವ ಉದ್ದೇಶ ಹೊಂದಲಾಗಿದೆ. ವಿಎಗಳಿಗೆ ಲ್ಯಾಪ್ ಟಾಪ್ ವಿತರಿಸಲಾಗಿದೆ. ಗ್ರಾಮ ಲೆಕ್ಕಾಧಿಕಾರಿಗಳು ರೈತರ ಮನೆಬಾಗಿಲಿಗೆ ಹೋಗಿ ಕೆಲಸ ಮಾಡುತ್ತಿದ್ದಾರೆ. ಈಗಾಗಲೆ 1000 ಗ್ರಾಮ ಲೆಕ್ಕಾಧಿಕಾರಿಗಳನ್ನು ನೇಮಕ ಮಾಡಲಾಗಿದೆ. 750 ಸರ್ವೆಯರ್ ನೇಮಕಾತಿ ಮಾಡಲಾಗುತ್ತಿದೆ. ರಾಜ್ಯಾದ್ಯಂತ 7850 ಗ್ರಾಮ ಲೆಕ್ಕಾಧಿಕಾರಿ ಕಚೇರಿ ಸ್ಥಾಪಿಸಲಾಗಿದೆ. ಇವೆಲ್ಲವೂ ಜನರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಮಾಡುತ್ತಿರುವ ಕೆಲಸಗಳು ಎಂದು ಸಚಿವರು ವಿವರಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ಹೆಚ್ ಮುನಿಯಪ್ಪ ಅವರು ಮಾತನಾಡಿ 75 ವರ್ಷಗಳಿಂದ ಸಾಕಷ್ಟು ರೈತರ ಭೂಮಿ ಪೋಡಿ, ಆಕಾರ್ ಬಂದ್, ಹಕ್ಕು ಪತ್ರ ಸಿಕ್ಕಿಲ್ಲ ಎಂಬ ಸಮಸ್ಯೆ ಇತ್ತು. ಇದನ್ನು ಬಗೆ ಹರಿಸುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಕೃಷ್ಣ ಬೈರೇಗೌಡ ಅವರಿಗೆ ಕಂದಾಯ ಇಲಾಖೆ ನೀಡಿದೆ. ರೈತರು ಕಚೇರಿಗೆ ಅಲೆಯುವುದು, ರೈತರ ಸಮಯ ವ್ಯರ್ಥ, ರೈತರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡುವ ನಿಟ್ಟಿನಲ್ಲಿ ಕಂದಾಯ ಸಚಿವರು ನಿರಂತರವಾಗಿ ಕೆಲಸ ಮಾಡಿ ಮನೆ ಮನೆಗೆ ಹಕ್ಕು ಪತ್ರ ನೀಡುವ ಕೆಲಸ ಮಾಡುತ್ತಿದ್ದಾರೆ. ಇದರ ಕೀರ್ತಿ ಕೃಷ್ಣ ಬೈರೇಗೌಡ ಅವರಿಗೆ ಸಲ್ಲಬೇಕು. ರಿಯಲ್ ಎಸ್ಟೇಟ್ ಡೆವಲಪರ್ಸ್, ರಿಯಲ್ ಎಸ್ಟೇಟ್ ಮಾಫಿಯಾಗಳು ಅನಗತ್ಯವಾಗಿ ರೈತರಿಗೆ ಕಿರುಕುಳ, ದಾಖಲೆ ತಿರುಚುವುದು, ತಿದ್ದುಪಡಿ ಮಾಡುವುದು, ನಕಲಿ ದಾಖಲೆ ಸೃಷ್ಟಿಸುವುದು, ದಾಖಲೆಗಳ ಕಳವು ಇಂತಹ ಎಲ್ಲಾ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಕ್ಕಂತಾಗಿದೆ.

ಪ್ರತಿ ತಾಲ್ಲೂಕಿನಲ್ಲಿ 2000 ದಿಂದ 5000 ಮನೆ, ಸೈಟ್ ಗಳ ಅವಶ್ಯಕತೆ ಇದೆ. ಪಂಚಾಯಿತ್ ರಾಜ್ ಸಚಿವರು, ಕಂದಾಯ ಸಚಿವರು ಒಟ್ಟಾಗಿ ಮುಖ್ಯ ಮಂತ್ರಿ, ಉಪಮುಖ್ಯಮಂತ್ರಿ ಸಭೆ ನಡೆಸಿ. ಎಲ್ಲೆಲ್ಲಿ ಸೈಟ್, ಮನೆ ನೀಡಲು ಅವಕಾಶ ಇದೆ ಅಲ್ಲಿ ಅತ್ಯಂತ ಜರೂರಾಗಿ ವಿಶೇಷ ಸಭೆ ಕರೆದು ಹಂತಹಂತವಾಗಿ ಮನೆ, ನಿವೇಶನ ಒದಗಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವರು ಸಲಹೆ ನೀಡಿದರು.

ಹೊಸಕೋಟೆ ಶಾಸಕರಾದ ಶರತ್ ಬಚ್ಚೇಗೌಡ ಅವರು ಪ್ರಾಸ್ತಾವಿಕವಾಗಿ ಮಾತನಾಡಿ ಸರ್ಕಾರದ ಕಾರ್ಯಕ್ರಮ, ಯೋಜನೆಗಳು ಸಮಾಜದ ಕೆಳವರ್ಗದ ಏಳಿಗೆಗಾಗಿ ಶ್ರಮಿಸುತ್ತಿದೆ. ಮಾಜಿ ಮುಖ್ಯಮಂತ್ರಿ ದಿವಂಗತ ದೇವರಾಜ ಅರಸುರವರು ಉಳುವವನಿಗೆ ಭೂಮಿ ಎಂದು ರೈತರ ಪರವಾಗಿ ಕ್ರಾಂತಿ ಮಾಡಿದರು. ಈಗ ಸಚಿವ ಕೃಷ್ಣಭೈರೇಗೌಡರು ಕಂದಾಯ ಇಲಾಖೆಯ ವತಿಯಿಂದ ಪೋಡಿ, ಪೌತಿಖಾತೆ, ಸಾಮಾಜಿಕ ಭದ್ರತಾ ಯೋಜನೆ ಹಾಗೂ ವಿವಿಧ ಯೋಜನೆಗಳ ಮೂಲಕ ಸಮಾಜದ ಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ 5ನೇ ರಾಜ್ಯ ಹಣಕಾಸು ಆಯೋಗದ ಅಧ್ಯಕ್ಷರಾದ ನಾರಾಯಣಸ್ವಾಮಿ, ಎಂಎಲ್ಸಿ ರವಿ, ಪುಟ್ಟಣ್ಣ, ನೆಲಮಂಗಲ ಶಾಸಕರಾದ ಶ್ರೀನಿವಾಸ್, ದೊಡ್ಡಬಳ್ಳಾಪುರ ಮಾಜಿ ಶಾಸಕ ವೆಂಕಟರಮಣಸ್ವಾಮಿ, ಗ್ಯಾರಂಟಿ ಯೋಜನೆ ಜಿಲ್ಲಾಧ್ಯಕ್ಷ ರಾಜಣ್ಣ, ಜಿಲ್ಲಾಧಿಕಾರಿ ಡಾ.ಕೆ.ಎನ್ ಅನುರಾಧ, ಎಡಿಸಿ ಸೈಯಿದಾ ಆಯಿಷಾ, ಹೊಸಕೋಟೆ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಕೇಶವ್ ಮೂರ್ತಿ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

ಕಂದಾಯ ಸೇವೆಗಳ ಸಮರ್ಪಣಾ ಸಮಾವೇಶದಲ್ಲಿ ಜಿಲ್ಲೆಯ 3500 ದರಖಾಸ್ತು ಪೋಡಿ, 75 ಕಂದಾಯ ಗ್ರಾಮಗಳ ಹಕ್ಕುಪತ್ರ, 10,100 ಪೌತಿ ಖಾತೆ, 2000 ಸಾಮಾಜಿಕ ಭದ್ರತೆಯ ಅಭಿಯಾನ ಸೇರಿ ಒಟ್ಟು 15,675 ಕಂದಾಯ ಸೇವೆಗಳ ದಾಖಲೆಗಳನ್ನ ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದೆ.

# ಮಾಗಡಿಯವರಿಗೆ ಕಾವೇರಿ, ಹೇಮಾವತಿ, ಎತ್ತಿನಹೊಳೆ ನೀರಿನ ಅದೃಷ್ಟ: ಡಿಸಿಎಂ ಡಿ.ಕೆ. ಶಿವಕುಮಾರ್



**ರಾಮನಗರ :** ಮಾಗಡಿ ಜನರಿಗೆ ಕಾವೇರಿ, ಹೇಮಾವತಿ ಹಾಗೂ ಎತ್ತಿನಹೊಳೆಯಿಂದಲೂ ನೀರು ಬರುತ್ತಿದ್ದು, ನೀರಿನ ಅದೃಷ್ಟವಿದೆ. ಇದಕ್ಕೆ ಅಗತ್ಯವಿರುವ ಟೆಂಡರ್ ಗಳನ್ನು ಈಗಾಗಲೇ ಕರೆಯಲಾಗಿದೆ? ಎಂದು ರಾಜ್ಯದ ಉಪ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಅವರು ಮಾ.4ರ ಬುಧವಾರ ಮಾಗಡಿಯಲ್ಲಿ ನಡೆದ ವೈ.ಜಿ. ಗುಡ್ಡ ಏತ ನೀರಾವರಿ ಯೋಜನೆ ಶಂಕುಸ್ಥಾಪನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಸತ್ತೇಗಾಲದಿಂದ ಇಗ್ಗಲೂರಿಗೆ 26 ಕಿ.ಮೀ, ಇಗ್ಗಲೂರಿನಿಂದ ಮೊಗೇನಹಳ್ಳಿಗೆ 58 ಕಿ.ಮೀ. ಮೊಗೇನಹಳ್ಳಿಯಿಂದ ಕಣ್ವಕ್ಕೆ 6 ಕಿ.ಮೀ, ಕಣ್ವದಿಂದ ವೈ.ಜಿ. ಗುಡ್ಡಕ್ಕೆ 25 ಕಿ.ಮೀ ಸೇರಿ ಒಟ್ಟು 115 ಕಿ.ಮೀ ಮಾರ್ಗದಲ್ಲಿ ಒಂದು ಕಡೆಯಿಂದ ಮತ್ತೊಂದು ಕಡೆಗೆ ನೀರನ್ನು ಪಂಪ್ ಮಾಡಿ ಹರಿಸಲಾಗುವುದು. ನಾವು ಅಂತರ್ಜಲ ಹೆಚ್ಚಳ ಮಾಡಲು ಈ ನೀರು ತರುತ್ತಿದ್ದೇವೆ. ಇದಕ್ಕೆ 160 ಎಚ್.ಪಿ ಪಂಪ್ ಮೂಲಕ 115 ಕಿ.ಮೀ ದೂರಕ್ಕೆ ಲಿಫ್ಟ್ ಮಾಡಲಾಗುತ್ತಿದೆ. ಆಮೂಲಕ ಈ ಭಾಗದ ಕೆರೆಗಳನ್ನು ತುಂಬಿಸುವ ಕೆಲಸ ಮಾಡುತ್ತಿದ್ದೇವೆ. ಇದರಿಂದ ರೈತರಿಗೆ ಶಕ್ತಿ ತುಂಬುವಂತಾಗುತ್ತದೆ. ಜನರ ಬದುಕಿನಲ್ಲಿ ಬಡಲಾವಣೆ ತರಲು ನಾವು ನಮ್ಮ ಕರ್ತವ್ಯ ಮಾಡುತ್ತಿದ್ದೇವೆ ಎಂದರು.

ರೈತರ ಪಂಪ್ ಸೆಟ್ ಗಳಿಗೆ 10 ಹೆಚ್.ಪಿ ಉಚಿತ ವಿದ್ಯುತ್ ನೀಡಿದ್ದು ನಮ್ಮ ಸರ್ಕಾರ. ಇಲ್ಲಿ ಬಂದಿದ್ದ ಕೆಲವು ಮಹಿಳಾ ಫಲಾನುಭವಿಗಳಿಗೆ ಪಟ್ಟಾ ದಾಖಲೆ ಕೊಟ್ಟಿದ್ದೇವೆ. ಅದರಲ್ಲಿ ಅವರ ಫೋಟೋ, ಅವರ ಮನೆ ಫೋಟೋ, ಇ ಖಾತಾ ನೀಡಿದ್ದೇವೆ. ಇದೇ ರೀತಿ 2.20 ಲಕ್ಷ ಜನರಿಗೆ ಆಸ್ತಿ ದಾಖಲೆ ನೀಡುವ ಮೂಲಕ ಭೂಮಿ ಗ್ಯಾರಂಟಿ ನೀಡಿದ್ದೇವೆ. ಉಳುವವನಿಗೆ ಭೂಮಿ, ಬಗರ್ ಹುಕ್ಕುಂ, ಅರಣ್ಯ ಭಾಗದ ರೈತರಿಗೆ ಜಮೀನು ಸೇರಿದಂತೆ ರೈತರ ಪರವಾಗಿ ದೆಹಲಿಯಲ್ಲಾದರೂ ಸರಿ, ರಾಜ್ಯದಲ್ಲಾದರೂ ಸರಿ ಯೋಜನೆ ರೂಪಿಸಿದ್ದರೆ ಅದು ನಮ್ಮ ಸರ್ಕಾರ ಮಾತ್ರ ಎಂದು ಹೇಳಿದರು.

**ನಮ್ಮದು ನಾಳೆ ಎನ್ನುವ ಸರ್ಕಾರವಲ್ಲ, ಇಂದೇ ಎನ್ನುವ ಸರ್ಕಾರ:** ಟಿವಿಯಲ್ಲಿ ಹೀಗೂ ಉಂಟೆ ಎಂಬ ಕಾರ್ಯಕ್ರಮವನ್ನು ಎಲ್ಲರೂ ನೋಡಿರುತ್ತೀರಿ. ನಾನು ಇಲ್ಲಿ ನಮ್ಮ ಕೆಲಸವನ್ನು ತೋರಿಸಲು ನಿಂತಿದ್ದೇನೆ ಹೊರತು, ಮುಂದೆ ಇಂತಹ ಕೆಲಸ ಮಾಡುತ್ತೇನೆ ಎಂದು ಹೇಳಲು ನಿಂತಿಲ್ಲ. ನಾಳೆ ಕೆಲಸ ಮಾಡುತ್ತೇವೆ ಎಂಬುದು ಶತ್ರುತ್ವ, ಇವತ್ತೇ ಕೆಲಸ ಮಾಡುತ್ತೇವೆ ಎಂಬುದು ಮಿತ್ರತ್ವ. ನಾಳೆ ಯಾರು ಇರುತ್ತಾರೋ ಇರುವುದಿಲ್ಲವೋ ಗೊತ್ತಿಲ್ಲ. ಅಧಿಕಾರ ಇದ್ದಾಗ ನಾವು ಏನು ಮಾಡಿದೆವು ಎಂಬುದು ಮುಖ್ಯ. ನಮ್ಮದು ನಾಳೆ ಎನ್ನುವ ಸರ್ಕಾರವಲ್ಲ, ಇಂದೇ ಎನ್ನುವ ಸರ್ಕಾರ? ಎಂದು ತಿಳಿಸಿದರು.

ನಮ್ಮ ಕೆಲಸ, ತೀರ್ಮಾನಗಳಿಂದ ಈ ಭಾಗದ ಜನರ ಆಸ್ತಿ ಮೌಲ್ಯ ಹೆಚ್ಚಾಗಿದೆ. ಬಿಡದಿ ಟೌನ್ ಶಿಪ್ ಯೋಜನೆ ಭೂಸಂತ್ರಸ್ತರಿಗೆ ಎಕರೆಗೆ 2.50 ಕೋಟಿ ಪರಿಹಾರ ನಿಗದಿ ಮಾಡಲಾಗಿದೆ. ?ನಾವು ಕೊಟ್ಟ ಮಾತಿನಂತೆ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದ್ದೇವೆ. ನಿಮ್ಮ ಮನೆಗಳಿಗೆ ಉಚಿತ ವಿದ್ಯುತ್, ಬಡ ಮಹಿಳೆಯರಿಗೆ ತಿಂಗಳಿಗೆ 2 ಸಾವಿರ, 10 ಕೆ.ಜಿ ಅಕ್ಕಿ, ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ವ್ಯವಸ್ಥೆ, ನಿರುದ್ಯೋಗಿ ಯುವಕರಿಗೆ ಆರ್ಥಿಕ ಶಕ್ತಿ ನೀಡಿದ್ದೇವೆ ಎಂದರು.

ಈ ಸರ್ಕಾರದಲ್ಲಿ ನನಗೆ ನೀರಾವರಿ ಇಲಾಖೆ ಜವಾಬ್ದಾರಿ ನೀಡಲಾಗಿದೆ. ಇದೇ ಶ್ರೀರಂಗ ಏತ ನೀರಾವರಿ ಯೋಜನೆ ಮೂಲಕ ಕುಣಿಗಲ್ ರೈತರಿಗೆ ನೀರು ಹರಿಸಲು ಮುಂದಾಗಿದ್ದೇವೆ. ಈ ನೀರಿಗಾಗಿ ಹೋರಾಟ ಮಾಡಿದ ವೈ.ಕೆ ರಾಮಯ್ಯ, ಹುಚ್ಚಮಾಸ್ತಿಗೌಡರ ಹೆಸರನ್ನು ಜನ ಇವತ್ತಿಗೂ ಚರ್ಚೆ ಮಾಡುತ್ತಿದ್ದಾರೆ. ಬೆಂಗಳೂರು ರೇಸ್ ಕೋರ್ಸ್ ಕುಣಿಗಲ್‌ಗೆ ಸ್ಥಳಾಂತರಿಸಿದರೆ ಅಲ್ಲಿ ಸುಮಾರು 2 ಸಾವಿರ ಜನರಿಗೆ ಕೆಲಸ ಸಿಗುತ್ತದೆ. ?ನಾವು ಶಾಶ್ವತವಲ್ಲ. ನಮ್ಮ ಕೆಲಸಗಳು ಮಾತ್ರ ಶಾಶ್ವತ. ಕೆಂಪೇಗೌಡರನ್ನು ನಾವು ನೆನೆಯುವುದು ಶಾಶ್ವತ. ಬಾಲಕೃಷ್ಣ ಅವರು ಚಕ್ರಬಾವಿಯಲ್ಲಿ ಒಂದು ಶಾಲೆ ಬೇಕು ಎಂದು ಕೇಳಿದರು. ಈ ಮನವಿ ಬಗ್ಗೆ ನಾನು, ಸುರೇಶ್ ಅವರೆಲ್ಲಾ ಸೇರಿ ಚರ್ಚೆ ಮಾಡಿ ಸಾಕ್ಷಿಗುಡ್ಡೆ ಬಿಟ್ಟು ಹೋಗುತ್ತೇವೆ. ನಾನು ಇಂಧನ ಸಚಿವನಾಗಿದ್ದಾಗ ಎಷ್ಟು ಸ್ಟೇಷನ್ ಮಾಡಿದ್ದೇನೆ, ಹೆಚ್ ವಿಡಿಎಸ್ ಯೋಜನೆಯಲ್ಲಿ ನಾನು ಕೊಟ್ಟಿರುವ ಟ್ರಾನ್ಸ್ಫಾರ್ಮರ್ ಗಳು, ಈ ಕೆರೆ ತುಂಬಿಸುವ ಯೋಜನೆ ಸೇರಿದಂತೆ ಮಾಗಡಿ ಕ್ಷೇತ್ರದ ನೀರಾವರಿ ಯೋಜನೆಗೆ 1 ಸಾವಿರ ಕೋಟಿ ಅನುದಾನ ನೀಡಲಾಗಿದೆ, ಕುಣಿಗಲ್ ಕ್ಷೇತ್ರದ ನೀರಾವರಿ ಯೋಜನೆಗಳಿಗೆ 1 ಸಾವಿರ ಕೋಟಿ, ರಾಮನಗರ ಹಾಗೂ ಕನಕಪುರ ಕ್ಷೇತ್ರಗಳಿಗೆ 1 ಸಾವಿರ ಕೋಟಿ ಅನುದಾನ ನೀಡಲಾಗಿದೆ ಎಂದವರು ಹೇಳಿದರು.


ಮನುಷ್ಯ ಸತ್ತಾಗ ಭೂಮಿಯೊಳಗೆ ಹೂತು ಬಿಡುತ್ತೇವೆ, ಆದರೆ ಅವರು ಮಾಡಿರುವ ಕೆಲಸಗಳು ಭೂಮಿಯ ಮೇಲೆ ಬದುಕಿರುತ್ತವೆ. ಇಂತಹ ನೀರಾವರಿ ಯೋಜನೆಗಳು ಸಾಕ್ಷಿಯಾಗಿ ಉಳಿದಿವೆ. ನಿಮಗೆ ಉತ್ತಮ ಜೀವನ ನೀಡಬೇಕು, ರೈತರನ್ನು ಕಾಪಾಡಬೇಕು. ತಾವರೆಕೆರೆ, ಕುಣಿಗಲ್ ನಿಂದ ಇಲ್ಲಿಯವರೆಗೂ ಅತ್ಯುತ್ತಮ ರಸ್ತೆಗಳು ನಿರ್ಮಾಣ ಮಾಡಲಾಗಿದೆ. ಮನುಷ್ಯನ ಹುಟ್ಟು ಆಕಸ್ಮಿಕ, ಸಾವು ಅನಿವಾರ್ಯ, ಜನನ ಉಚಿತ, ಮರಣ ಖಚಿತ. ಈ ಹುಟ್ಟು ಸಾವಿನ ಮಧ್ಯೆ ನಾವು ಏನು ಮಾಡುತ್ತೇವೆ ಎಂಬುದು ಮುಖ್ಯ. ಅದೇರೀತಿ ನೀವು ಆಯ್ಕೆ ಮಾಡಿರುವ ಬಾಲಕೃಷ್ಣ ಅವರು ನಿಮಗೆ ಇಷ್ಟೆಲ್ಲಾ ಕೆಲಸ ಮಾಡಿದ್ದಾರೆ. ಅವರಿಗೆ ಇನ್ನಷ್ಟು ಶಕ್ತಿ ತುಂಬಬೇಕು. ನಾನು, ರಂಗನಾಥ್, ಸುರೇಶ್ ಇಲ್ಲಿಗೆ ಬಂದಿರುವುದೇ ಬಾಲಕೃಷ್ಣ ಅವರ ಕೈಬಲಪಡಿಸಲು. ಅವರು ಉತ್ತಮ ಕಾರ್ಯ ಮಾಡುತ್ತಿದ್ದು, ಅವರಿಗೆ ದೇವರು ಇನ್ನಷ್ಟು ಶಕ್ತಿ ಕೊಡುತ್ತಾನೆ ಎಂಬ ವಿಶ್ವಾಸ ನನಗಿದೆ? 18–20 ತಿಂಗಳಲ್ಲಿ ಈ ಯೋಜನೆ ಮಾಡಲು ಸೂಚಿಸಲಾಗಿದೆ ಎಂದರು.

ಸಾರಿಗೆ, ಮುಜರಾಯಿ ಇಲಾಖೆ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲಾ ಉಸ್ತುವಾರಿ ಸಚಿವರಾದ ರಾಮಲಿಂಗರೆಡ್ಡಿ ಅವರು ಮಾತನಾಡಿ, ಏತ ನೀರಾವರಿ ಯೋಜನೆಯಡಿ ಮಾಗಡಿ ತಾಲ್ಲೂಕಿನ 17 ರಿಂದ 18 ಗ್ರಾಮಗಳು, ಕುಣಿಗಲ್ ತಾಲ್ಲೂಕಿನ 30 ರಿಂದ 40 ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸಲಾಗುತ್ತಿದೆ. ಮಾಗಡಿ ಭಾಗದ ಜನರಿಗೆ ಅನುಕೂಲವಾಗಲು ಮಾಗಡಿ ವೈ.ಜಿ. ಗುಡ್ಡ ಏತ ನೀರಾವರಿ ಯೋಜನೆ ಶಂಕುಸ್ಥಾಪನೆ ಸಮಾರಂಭ ಆಯೋಜಿಸಲಾಗಿದೆ. ಸ್ಥಳೀಯ ಶಾಸಕರು 100 ಕೋಟಿ ವೆಚ್ಚದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಿದ್ದಾರೆ. ಸರ್ಕಾರಿ ಜಮೀನಿನಲ್ಲಿ ಮನೆ ನಿರ್ಮಾಣ ಮಾಡಿಕೊಂಡಿರುವವರಿಗೆ ಕಂದಾಯ ಇಲಾಖೆ ವತಿಯಿಂದ ಹಕ್ಕುಪತ್ರಗಳನ್ನು ವಿತರಿಸಲಾಗುತ್ತಿದೆ ಎಂದರು.

ಸುಮಾರು 103 ಕೋಟಿ ವೆಚ್ಚದಲ್ಲಿ ಕೆಂಪೇಗೌಡರ ಕೋಟೆಯನ್ನು 18 ತಿಂಗಳಲ್ಲಿ ಅಭಿವೃದ್ಧಿಗೊಳಿಸುವಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. ಕುದೂರು ಹೋಬಳಿಯಲ್ಲಿ ಜನಸಂಖ್ಯೆ ಹೆಚ್ಚಾಗಿರುವ ಕಾರಣ ಆ ಭಾಗದ ಜನರ ಅನುಕೂಲಕ್ಕೆ ಹೆಚ್ಚುವರಿ ಬಸ್ಸುಗಳನ್ನು ಹಾಕಲಾಗುವುದು. ಬಿಎಂಟಿಸಿ ಬಸ್‌ಗಳು ಮಾಗಡಿ ತಾಲ್ಲೂಕಿಗೂ ಬರಲಿದೆ. ಸಿಎಸ್‌ಆರ್ ನಿಧಿಯಲ್ಲಿ ಮಾಗಡಿ ತಾಲ್ಲೂಕಿನಲ್ಲಿಯೂ ಸುಸಜ್ಜಿತ 5 ಕೆಪಿಎಸ್ ಶಾಲೆಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುವುದು ಎಂದು ಹೇಳಿದರು.

ಬೆಂಗಳೂರು ದಕ್ಷಿಣ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕೆ. ರಾಜು ಅವರು ಮಾತನಾಡಿ, ರಾಜ್ಯದ ಜನರ ಅನುಕೂಲಕ್ಕೆ ಸರ್ಕಾರಿಂದ ಐದು ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದ್ದು, ಹಳ್ಳಿಗಳಲ್ಲಿ ಎಕರೆಗಟ್ಟಲೇ ಇದ್ದರೂ ಸಹ 2 ಸಾವಿರ ರೂ.ಗಳನ್ನು ಸಂಪಾದನೆ ಮಾಡಲು ಕಷ್ಟವಾಗುತ್ತಿತ್ತು. ಆದರೆ ರಾಜ್ಯ ಸರ್ಕಾರ ಮಹಿಳೆಯರು ಆರ್ಥಿಕವಾಗಿ, ಸ್ವಾಭಿಮಾನಿಯಾಗಿ, ಆರೋಗ್ಯಕರ ಜೀವನ ನಿಭಾಹಿಸಲು ಗೃಹಲಕ್ಷ್ಮಿ ?ಮೀ ಯೋಜನೆಯಡಿ ಮಹಿಳೆಯರಿಗೆ 2 ಸಾವಿರ ರೂ.ಗಳನ್ನು ಅವರ ಖಾತೆಗೆ ಜಮೆ ಮಾಡಿ ಸಹಕರಿಸುತ್ತಿದೆ ಹಾಗೂ ರಾಜ್ಯ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳಿಂದ ಸರ್ಕಾರದ ಬಲ ಹೆಚ್ಚುತ್ತಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ರಾಜ್ಯ ರಸ್ತೆ ಅಭಿವೃದ್ಧಿ ನಿಗಮದ ಅಧ್ಯಕ್ಷರು ಹಾಗೂ ಮಾಗಡಿ ವಿಧಾನಸಭಾ ಕ್ಷೇತ್ರದ ಶಾಸಕರಾದ ಎಚ್.ಸಿ. ಬಾಲಕೃಷ್ಣ ಅವರು ಮಾತನಾಡಿ, ಸುಮಾರು ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಮನೆಗಳನ್ನು ನಿರ್ಮಿಸಿಕೊಂಡು ಹಾಗೂ ಸರ್ಕಾರಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡು ಜೀವನ ನಡೆಸುತ್ತಿರುವ ಸಾರ್ವಜನಿಕರಿಗೆ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ದಾಖಲಾತಿಗಳು ಇರುವುದಿಲ್ಲ. ಆದ್ದರಿಂದ ಅಂತವರನ್ನು ಗುರುತಿಸಿ, ಎ ಖಾತೆ ಹಾಗೂ ಬಿ ಖಾತೆಗಳನ್ನು ಮಾಡಿಕೊಡುವ ನಿಟ್ಟಿನಲ್ಲಿ ಇಂದು ಚಾಲನೆ ನೀಡಲಾಗಿದೆ.



# ಪ್ರಾಪ್ತಿ : ವಿಶ್ವದ ಅಗೋಚರ ವ್ಯವಸ್ಥೆ

ನಾವು ಇಂದು ಸವಿಯುತ್ತಿರುವ ಒಂದು ಸಣ್ಣ ಹಣ್ಣಿನ ತುಣುಕು ಕೇವಲ ಮಾರುಕಟ್ಟೆಯಿಂದ ಬಂದ ವಸ್ತುವಲ್ಲ. ಅದು ಪ್ರಕೃತಿಯ ಒಂದು ಸುದೀರ್ಘ ಯೋಜನೆಯ ಫಲ. ಆ ಹಣ್ಣಿನ ಬೀಜ ಮಣ್ಣಿನಲ್ಲಿ ಬಿದ್ದಾಗ, ಅದಕ್ಕೆ ನೀರುಣಿಸಿದ ಕೈಗಳು, ಅದನ್ನು ಕಾಯ್ದ ಮಾಲಿ, ಲಾರಿಯಲ್ಲಿ ಹೊತ್ತು ತಂದ ಚಾಲಕ ಮತ್ತು ಅದನ್ನು ಮಾರಿದ ವರ್ತಕ – ಇವರೆಲ್ಲರೂ ಅರಿಯದೆಯೇ ನಿಮಗಾಗಿ ಕೆಲಸ ಮಾಡುತ್ತಿದ್ದರು. ಅಂತಿಮವಾಗಿ ಆ ಹಣ್ಣು ನಿಮ್ಮ ಕೈ ಸೇರಿದ್ದೇ ಆದರೆ, ಅದು ಸೃಷ್ಟಿಯ ನಿಯಮದಂತೆ 'ನಿಮ್ಮ ಪಾಲಿನದ್ದು' ಎಂದೇ ಅರ್ಥ.

ಬದುಕಿನಲ್ಲಿ ನಮಗೆ ಅರ್ಹವಾದುದು ನಮಗೆ ಸಿಕ್ಕೇ ಸಿಗುತ್ತದೆ ಎನ್ನುವ ಮಾತು ಕೇಳಲು ಸರಳವೆನಿಸಿದರೂ, ಅದರ ಹಿಂದೆ ಅತೀಂದ್ರಿಯವಾದ ವಿಶ್ವಾಸವೊಂದಿದೆ. ನಾವು ಇಂದು ತಿನ್ನುತ್ತಿರುವ ಹಣ್ಣಿನ ಪ್ರತಿ ತುಣುಕೂ ಸಹ, ಆ ಬೀಜ ಮಣ್ಣಿನಲ್ಲಿ ಬಿತ್ತಲ್ಪಟ್ಟ ಕ್ಷಣದಲ್ಲೇ ನಮಗಾಗಿ ಮೀಸಲಾಗಿರುತ್ತದೆ. ಅದು ಬೆಳೆದು, ಯಾರೋ ಒಬ್ಬ ವ್ಯಾಪಾರಿಯ ಕೈ ಸೇರಿ, ಅಂತಿಮವಾಗಿ ನಮ್ಮ ತಟ್ಟೆಗೆ ಬರುವವರೆಗಿನ ಹಾದಿ ಒಂದು ಸೋಜಿಗ.

ಇದನ್ನೇ ಆಧ್ಯಾತ್ಮಿಕ ಪರಿಭಾಷೆಯಲ್ಲಿ 'ಪ್ರಾಪ್ತಿ' ಎನ್ನಲಾಗುತ್ತದೆ. ಈ ಸತ್ಯವನ್ನು ಅರಿತರೆ ನಮ್ಮ ಬದುಕಿನ ಅರ್ಧದಷ್ಟು ಆತಂಕಗಳು ದೂರವಾಗುತ್ತವೆ.

**ಪ್ರಕೃತಿಯಲ್ಲಿದೆ ನಮಗೆ ಪಾಠ:** ನಮ್ಮ ಪೂರ್ವಜರು ಒಂದು ಮಾತು ಹೇಳುತ್ತಿದ್ದರು: "ಪಕ್ಷಿಯೊಂದು ಹಸಿದಾಗ ಅದಕ್ಕೆ ಬೇಕಾದ ಕಾಳು ಎಲ್ಲೋ ಒಂದು ಕಡೆ ಸಿದ್ಧವಾಗಿರುತ್ತದೆ." ಪ್ರಕೃತಿಯಲ್ಲಿ ಯಾವುದೂ ವ್ಯರ್ಥವಲ್ಲ ಮತ್ತು ಯಾವುದೂ ಗುರಿ ತಪ್ಪುವುದಿಲ್ಲ.

* ಮಳೆಯ ಹನಿ ಭೂಮಿಯ ಮೇಲೆ ಬೀಳುವಾಗ, ಅದು ಒಣಗಿದ ಯಾವ ಬೇರಿಗೆ ತಲುಪಬೇಕೋ ಅಲ್ಲಿಗೇ ತಲುಪುತ್ತದೆ.
* ಒಂದು ಹೂವು ಅರಳಿದಾಗ, ಅದರ ಮಕರಂದವನ್ನು ಹೀರುವ ದುಂಬಿ ಮೈಲಿಗಳ ದೂರದಿಂದ ಅದನ್ನು ಹುಡುಕಿಕೊಂಡು ಬರುತ್ತದೆ.

ಇದು ಕೇವಲ ಕಾಕತಾಳೀಯವಲ್ಲ; ಇದು ವಿಶ್ವದ ವ್ಯವಸ್ಥೆ. ನಮ್ಮ ಶ್ರಮ ಮತ್ತು ಅರ್ಹತೆ ಒಂದಾದಾಗ, 'ಬೆನ್ನು ಹತ್ತಿದ' ಅದೃಷ್ಟ ನಮಗೆ ಒಲಿಯುತ್ತದೆ.

ಈ ಸರಳ ಸತ್ಯವನ್ನು ನಾವು ಬದುಕಿನ ದೊಡ್ಡ ನಿರ್ಧಾರಗಳಿಗೆ ಮತ್ತು ಆತಂಕಗಳಿಗೆ ಅನ್ವಯಿಸಿಕೊಂಡರೆ, ನಮ್ಮ ಜೀವನದ ದೃಷ್ಟಿಕೋನವೇ ಬದಲಾಗುತ್ತದೆ.

1. ಅರ್ಹತೆ ಮತ್ತು ಪ್ರಾಪ್ತಿಯ ನಡುವಿನ ಸಂಬಂಧ
ನಮ್ಮ ಹಿರಿಯರು ಹೇಳುತ್ತಿದ್ದರು, "ಹಣೆಯಲ್ಲಿ ಬರೆದದ್ದು ಹಳ್ಳ ಹಿಡಿಯದು" ಎಂದು. ಇದರರ್ಥ ನಾವು ಸೋಮಾರಿಗಳಾಗಬೇಕು ಎಂದಲ್ಲ. ಬದಲಿಗೆ, ನಾವು ಪಟ್ಟ ಶ್ರಮಕ್ಕೆ ತಕ್ಕ ಫಲವು ಬೇರೆಯವರ ಪಾಲಾಗಲು ಸಾಧ್ಯವೇ ಇಲ್ಲ ಎಂಬ ಅಚಲ ವಿಶ್ವಾಸ ನಮ್ಮದಾಗಿರಬೇಕು.

ಉದಾಹರಣೆ: ನದಿಯಲ್ಲಿ ಹರಿಯುವ ನೀರು ಎಲ್ಲರಿಗೂ ಲಭ್ಯವಿರುತ್ತದೆ. ಆದರೆ ಪ್ರತಿಯೊಬ್ಬರೂ ತಮ್ಮಲ್ಲಿರುವ ಪಾತ್ರೆಯ ಗಾತ್ರಕ್ಕೆ ಅನುಗುಣವಾಗಿ ಮಾತ್ರ ನೀರನ್ನು ತುಂಬಿಸಿಕೊಳ್ಳಲು ಸಾಧ್ಯ. ಇಲ್ಲಿ 'ಪಾತ್ರೆ' ಎನ್ನುವುದು ನಮ್ಮ ಸನ್ನದ್ಧತೆ (ಖಜಚಿಜುಟಿಚಿ). ನೀವು ಎಷ್ಟು ದೊಡ್ಡ ಪಾತ್ರೆ ಹಿಡಿಯುತ್ತೀರೋ ಅಷ್ಟು ನೀರು ನಿಮ್ಮದಾಗುತ್ತದೆ. ಆದರೆ ಆ ನೀರು ನಿಮ್ಮ ಪಾತ್ರೆಗೆ ಬೀಳುವವರೆಗೂ ಅದು ನದಿಯಲ್ಲೇ ಇರುತ್ತದೆ ಎಂಬ ತಾಳ್ಮೆ ನಮಗಿರಬೇಕು.

2. ವಿಳಂಬವೆಂದರೆ ನಿರಾಕರಣೆಯಲ್ಲ (Delay is not Denial)

ಬಹಳಷ್ಟು ಬಾರಿ ನಾವು ಅಂದುಕೊಂಡ ಕೆಲಸ ತಕ್ಷಣ ಆಗದಿದ್ದಾಗ ನಿರಾಶರಾಗುತ್ತೇವೆ. "ನನಗಿಂತ ಕಡಿಮೆ ಶ್ರಮ ಪಟ್ಟವರಿಗೆ ಯಶಸ್ಸು ಸಿಕ್ಕಿತು, ನನಗೇಕೆ ಇಲ್ಲ?" ಎಂಬ ಪ್ರಶ್ನೆ ಕಾಡುತ್ತದೆ.

ಇಲ್ಲಿ ನಾವು ಪ್ರಕೃತಿಯ ಒಂದು ಸುಂದರ ಉದಾಹರಣೆಯನ್ನು ಗಮನಿಸಬೇಕು: ಚೀನೀ ಬಿದಿರಿನ (ಋಟಿಜಿಜ ಃಚಿಟಿಭಿಠಿ) ಕಥೆ. ಈ ಬಿದಿರಿನ ಬೀಜವನ್ನು ಬಿತ್ತಿದ ನಂತರ ನಾಲ್ಕು ವರ್ಷಗಳ ಕಾಲ ಭೂಮಿಯ ಮೇಲೆ ಯಾವುದೇ ಕುರುಹು ಕಾಣಿಸುವುದಿಲ್ಲ. ಎಷ್ಟೇ ನೀರು ಹಾಕಿದರೂ ಗಿಡ ಚಿಗುರುವುದಿಲ್ಲ. ಆದರೆ ಐದನೇ ವರ್ಷದಲ್ಲಿ, ಕೇವಲ ಆರು ವಾರಗಳ ಅವಧಿಯಲ್ಲಿ ಅದು 80 ಅಡಿ ಎತ್ತರಕ್ಕೆ ಬೆಳೆಯುತ್ತದೆ! ಆ ನಾಲ್ಕು ವರ್ಷಗಳ ಕಾಲ ಅದು ಭೂಮಿಯ ಆಳದಲ್ಲಿ ತನ್ನ ಬೇರುಗಳನ್ನು ಭದ್ರಪಡಿಸಿಕೊಳ್ಳುತ್ತಿರುತ್ತದೆ.

ನಿಮ್ಮ ಯಶಸ್ಸು ವಿಳಂಬವಾಗುತ್ತಿದೆ ಎಂದರೆ, ದೇವರು ನಿಮ್ಮ ಬದುಕಿನ 'ಬೇರು'ಗಳನ್ನು ಗಟ್ಟಿಗೊಳಿಸುತ್ತಿದ್ದಾನೆ ಎಂದರ್ಥ. ನಿಮ್ಮ ಪಾಲಿನ 'ಬಿದಿರು' ಬೆಳೆಯುವ ಸಮಯ ಬಂದೇ ಬರುತ್ತದೆ.


3. ತಪ್ಪು ವಿಳಾಸಕ್ಕೆ ಹೋಗದ 'ದೈವದತ್ತ' ಕೊಡುಗೆಗಳು
ನಮ್ಮ ಬದುಕಿನಲ್ಲಿ ನಮಗೆ ಸಿಗಬೇಕಾದ ಗೌರವ, ಪ್ರೀತಿ ಅಥವಾ ಸಂಪತ್ತು ಎಂದಿಗೂ ಮತ್ತೊಬ್ಬರ ಮನೆ ಬಾಗಿಲು ತಟ್ಟುವುದಿಲ್ಲ. ಒಂದು ವೇಳೆ ಅದು ಬೇರೆಯವರ ಪಾಲಾಯಿತು ಎಂದರೆ, ಅದು ಮೊದಲೇ ನಮ್ಮದಾಗಿರಲಿಲ್ಲ ಎಂದೇ ಅರ್ಥ.
ಜೀವನದ ಒಂದು ಸಣ್ಣ ಸೂತ್ರ: > "ಯಾವುದು ನಿಮ್ಮನ್ನು ಹುಡುಕಿಕೊಂಡು ಬರುತ್ತದೋ ಅದು ನಿಮ್ಮದು. ಯಾವುದಕ್ಕಾಗಿ ನೀವು ಅತಿಯಾಗಿ ಹಪಹಪಿಸಿ, ಅನ್ಯಾಯದ ಹಾದಿ ಹಿಡಿಯುತ್ತೀರೋ ಅದು ನಿಮ್ಮದಾದರೂ ಹೆಚ್ಚು ಕಾಲ ಉಳಿಯದು."

4. **ಆತಂಕ ಮುಕ್ತ ಬದುಕಿನತ್ತ ಹೆಜ್ಜೆ**
ನಾವು ನಮ್ಮ ಕರ್ತವ್ಯವನ್ನು ಅತ್ಯಂತ ಶ್ರದ್ಧೆಯಿಂದ ಮಾಡಬೇಕು. ಫಲದ ಬಗ್ಗೆ ಚಿಂತಿಸುವುದು ನಮ್ಮ ಕೆಲಸವಲ್ಲ, ಅದು ಕಾಲದ ಕೆಲಸ.

* **ಹೋಲಿಕೆ ಬೇಡ:** ಮತ್ತೊಬ್ಬರ ತಟ್ಟೆಯಲ್ಲಿರುವ ಹಣ್ಣು ದೊಡ್ಡದಿದೆ ಎಂದು ವ್ಯಥೆಪಡಬೇಡಿ. ನಿಮ್ಮ ತಟ್ಟೆಯಲ್ಲಿರುವ ಹಣ್ಣು ನಿಮಗಾಗಿ ವಿಶೇಷವಾಗಿ ಸೃಷ್ಟಿಯಾದದ್ದು.
* **ಕೃತಜ್ಞತೆ ಇರಲಿ:** ನಮ್ಮ ಕೈ ಸೇರಿದ ಸಣ್ಣ ಪುಟ್ಟ ಯಶಸ್ಸುಗಳಿಗೂ ಕೃತಜ್ಞರಾಗಿರಬೇಕು. ಏಕೆಂದರೆ ಆ ಪುಟ್ಟ ಯಶಸ್ಸಿನ ಹಿಂದೆ ಸಾವಿರಾರು ಘಟನೆಗಳ ಸರಪಳಿ ಇರುತ್ತದೆ.

ನೆನಪಿಡಿ, ವಿಧಿಯು ಎಂದಿಗೂ ಯಾರಿಗೂ ಅನ್ಯಾಯ ಮಾಡುವುದಿಲ್ಲ. ಪ್ರಪಂಚದ ಯಾವುದೋ ಮೂಲೆಯಲ್ಲಿ ನಿಮಗಾಗಿ ಒಂದು ಅವಕಾಶ, ಒಂದು ಯಶಸ್ಸು ಅಥವಾ ಒಂದು ಸಂತೋಷದ ಕ್ಷಣ ಸಿದ್ಧವಾಗುತ್ತಿದೆ. ಅದು ಸರಿಯಾದ ಸಮಯಕ್ಕೆ ನಿಮ್ಮ ಬಾಗಿಲು ತಟ್ಟುತ್ತದೆ. ಅಲ್ಲಿಯವರೆಗೆ ನಿಮ್ಮ ಪಯಣವನ್ನು ನಗುನಗುತ್ತಾ ಮುಂದುವರಿಸಿ.

ನಿಮ್ಮ ಪಾಲಿನ ಹಣ್ಣು ಮಾಗುತ್ತಿದೆ, ತಾಳ್ಮೆಯಿರಲಿ!



**। ರಚನೆ : ಸ್ವಾಮಿನಾಥನ್**
ಮೊಬೈಲ್ : 9880041516
Email : Swamynathann@gmail.com

## ಶ್ರೀಚಕ್ರರಾಜ ಸಿಂಹಾಸನೇಶ್ವರಿ: ಸ್ವರದಿಂದ ಕೈವಲ್ಯದವರೆಗೆ

# ಶ್ರೀವಿದ್ಯಾಂಜಗತಾಂಧಾತ್ರಿಂಸರ್ಗಸ್ಥಿತಿಲೇಯೇಶ್ವರಿಂ ನಮಾಮಿಲಲಿತಾಂನಿತ್ಯಾಂಮಹಾತ್ರಿಪುರಸುಂದರಿಂ.

ಪ್ರತಿಯೊಬ್ಬ ಶ್ರೀವಿದ್ಯಾ ಉಪಾಸಕನಿಗೆ ?ನಮಾಮಿ ಲಲಿತಾಂ ನಿತ್ಯಾಂ? ಅಂದರೆ ಪ್ರತಿನಿತ್ಯ ಲಲಿತೆಯನ್ನು ಆರಾಧನೆ ಮಾಡುವಂತದ್ದು ಮತ್ತು ನೆನಪು ಮಾಡಿಕೊಳ್ಳುವಂತಹುದು ಬಹಳವೇ ಪ್ರಮುಖವಾದ ಘಟ್ಟವಾಗಿದೆ. ಹೇಗೆ ನಮ್ಮ ನಿತ್ಯ ಜೀವನದಲ್ಲಿ ನಾವು ಉಸಿರಾಡುತ್ತೇವೆಯೋ, ಆಹಾರ ಸ್ವೀಕರಿಸುತ್ತೇವೆಯೋ ಅದೇ ರೀತಿಯಲ್ಲಿ ಒಂದು ಭಾಗವಾಗಿ ಅಮ್ಮನವರ ಆರಾಧನೆ ನಿಂತುಗೊಳ್ಳುತ್ತದೆ.. ಹೀಗೆ ಅಮ್ಮನವರ ಆರಾಧನೆಯಲ್ಲಿ ಸದಾಕಾಲ, ಕ್ಷಣ ಕ್ಷಣದಲ್ಲಿಯೂ ತಾಯಿ ಜಗನ್ಮಾತೆಯನ್ನು, ಭುವನೇಶ್ವರಿಯನ್ನು, ಲಲಿತೆಯನ್ನು ಪ್ರಾರ್ಥನೆ ಮಾಡುವಂತಹದು ಜೀವನದ ತುಂಬಾ ಅದ್ಭುತವಾದ ಕ್ಷಣಗಳು. ಸದಾಕಾಲ ಅಮ್ಮನವರ ಸ್ಮೃತಿಯಲ್ಲಿ ಇರುವಂತದ್ದನ್ನೇ ಉಪಾಸನೆ ಎನ್ನುತ್ತೇವೆ.

**ಶ್ರೀ ವಿದ್ಯಾಂ ಜಗತಾಂ ಧಾತ್ರಿಂ –** ಶ್ರೀ ವಿದ್ಯಾ ಉಪಾಸನೆಯು ಲಲಿತಾ ತ್ರಿಪುರಸುಂದರಿಯನ್ನು ದೈವಿಕ ತಾಯಿಯನ್ನಾಗಿ ಆರಾಧಿಸುವ ಒಂದು ಶಕ್ತಿಶಾಲಿ ತಾಂತ್ರಿಕ ಹಾಗೂ ಭಕ್ತಿಮಾರ್ಗವಾಗಿದೆ. ಈ ಮಹಾವಿದ್ಯೆಯು ಸಮಸ್ತ ಭೂಮಂಡಲವನ್ನೇ ಹಿಡಿದಿಟ್ಟುಕೊಂಡಿರುವ ಶಕ್ತಿಯಾಗಿದೆ ಎಂದು ಹೇಳುತ್ತಾರೆ. ?ಸರ್ಗ ಸ್ಥಿತಿಲಯೇಶ್ವರಿಂ? ಅಂದರೆ ಸೃಷ್ಟಿ, ಸ್ಥಿತಿ ಹಾಗೂ ಲಯಕ್ಕೆ ಸಮಾನವಾದ ಶಕ್ತಿಯನ್ನು ಹೊಂದಿರುವಂತವಳು ತಾಯಿ ಲಲಿತಾಂಬಿಕೆ ಎಂದಾಗುತ್ತದೆ. ಇಂತಹ ಮಹಾವಿದ್ಯೆಯನ್ನು ಸಾಕಷ್ಟು ಮಹನೀಯರು, ಅವರವರ ಜ್ಞಾನಕ್ಕೆ ತಕ್ಕದಾಗಿ ಶಕ್ತಿಯನ್ನು ಪಡೆದು ಅಮ್ಮನವರ ಸೇವೆಯನ್ನು ಮಾಡುತ್ತಾ ಬಂದಿದ್ದಾರೆ. ಅಂತವಹರಲ್ಲಿ ಪರಶುರಾಮ, ದಕ್ಷಿಣ ಮೂರ್ತಿ, ಪರಮೇಶ್ವರ, ಇಂದ್ರ, ಚಂದ್ರ, ಮನು, ಲೋಪಾಮುದ್ರಾ ಮುಂತಾದ ಮಹನೀಯರು, ತೇಜೋಮಯರು ಅಮ್ಮನವರ ಆರಾಧನೆಯನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ವಿಶೇಷವಾಗಿ ಅಮ್ಮನವರ ಆರಾಧನೆಯನ್ನು ಮಾಡಿದವರಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ನಮ್ಮ ಮುತ್ತುಸ್ವಾಮಿ ದೀಕ್ಷಿತರು.

ಮುತ್ತುಸ್ವಾಮಿ ದೀಕ್ಷಿತರು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರು. ಇನ್ನಿಬ್ಬರು ತ್ಯಾಗರಾಜರು ಮತ್ತು ಶ್ಯಾಮಾ ಶಾಸ್ತ್ರಿಗಳು. ಬಹುತೇಕ ವಾಗ್ಗೇಯಕಾರರು ತೆಲುಗಿನಲ್ಲಿ ಹೆಚ್ಚು ಕೃತಿಗಳನ್ನು ರಚಿಸಿದ್ದರೆ, ದೀಕ್ಷಿತರ ಕೃತಿಗಳೆಲ್ಲವೂ ಸಂಸ್ಕೃತದಲ್ಲಿ ರಚಿತವಾಗಿರುವುದು ಎಂಬುದು ಮಹತ್ವದ ವಿಚಾರವಾಗಿದೆ. ದೀಕ್ಷಿತರ ಸಂಗೀತ ಶೈಲಿಯನ್ನು ನಾರಿಕೇಳಪಾಕಕ್ಕೆ ಹೋಲಿಸಲಾಗುತ್ತದೆ. ತೆಂಗಿನಕಾಯಿಯಲ್ಲಿ, ಹೇಗೆ ಹೊರಗೆ ಕಠಿಣವಾದ ಕರಟವಿದ್ದು ಒಳಗೆ ಸವಿಯಾದ ಎಳನೀರೂ, ರುಚಿಯಾದ ಕಾಯಿಯೂ ಇರುತ್ತದೆಯೋ ಅದೇ ರೀತಿ, ಮೇಲ್ನೋಟಕ್ಕೆ ಇವರ ಕೃತಿಗಳು ಕಠಿಣವಾಗಿ ತೋರಿದರೂ, ಅವುಗಳಲ್ಲಿರುವ ಸುಮಧುರ ಸಂಗೀತ ಸಾಹಿತ್ಯದ ಅಂಶಗಳಿಂದಾಗಿ, ಅವರ ಕೃತಿಗಳು ಶ್ರೇಷ್ಠ ವಾಗ್ಗೇಯಕಾರತ್ವಕ್ಕೆ ನಿದರ್ಶನವಾಗಿವೆ.


ಸ್ವತಃ ಶ್ರೀವಿದ್ಯಾ ಉಪಾಸಕರಾದ ದೀಕ್ಷಿತರು, ಅಮ್ಮನವರ ಆರಾಧನೆ ಮಾಡಲೇಬೇಕು ಎನ್ನುವ ತತ್ವಾರ್ಥದಲ್ಲಿ ಕೆಲವು




ಕೃತಿಗಳನ್ನು ರಚಿಸುತ್ತಾರೆ. ಈ ಕೃತಿಗಳು ಮುಖ್ಯವಾಗಿ ಶಾಸ್ತ್ರಬದ್ಧವಾದ ಅರ್ಥಪೂರ್ಣವಾದ ವೈಜ್ಞಾನಿಕ ದೃಷ್ಟಿಕೋನವುಳ್ಳದ್ದಾಗಿವೆ. ಶ್ರೀಚಕ್ರ ಉಪಾಸನೆಯಲ್ಲಿ ದೇವಿಯನ್ನು ನಾನಾ ವಿಧವಾಗಿ, ಅತ್ಯಂತ ಭಕ್ತಿಯಿಂದ ಆರಾಧಿಸುವ ಅನುಷ್ಠಾನಗಳಿವೆ. ಇದರಲ್ಲಿ ಒಂಭತ್ತು ಆವರಣಗಳ ಪೂಜೆಯಿದೆ. ಪ್ರತಿಯೊಂದು ವೃತ್ತದಲ್ಲೂ ಪೂಜೆಯ ವಿಧಾನಕ್ಕೆ ಬೇರೆಯದೇ ಆದ ಹೆಸರೂ ಮತ್ತು ಶಕ್ತಿಯೂ ಇದೆ. ಇಲ್ಲಿರುವ ಒಂಭತ್ತು ಚಕ್ರಗಳನ್ನೂ ಪೂಜಿಸಿದ ನಂತರವೇ ದೇವಿಯ ಅನುಗ್ರಹ ನಮಗೆ ಲಭಿಸುವುದು. ಈ ನವಾವರಣಗಳಿಂದ ಕೂಡಿದ "ಶ್ರೀಚಕ್ರ"ದ ಉಪಾಸನೆಯೇ "ಶ್ರೀವಿದ್ಯೆ". ಆ ಲಲಿತಾಂಬಿಕೆ, ಜಗನ್ಮಾತೆ, ಪರಾಶಕ್ತಿ, ಬಿಂದುಸ್ವರೂಪಳಾಗಿ ಶ್ರೀಚಕ್ರದಲ್ಲಿ ಕುಳಿತಿದ್ದಾಳೆ. ಸಾಟಿಯಿಲ್ಲದ ಅತ್ಯಂತ ಉತ್ಕೃಷ್ಟವಾದ ನವಾವರಣ ಕೃತಿಗಳಲ್ಲಿ ದೀಕ್ಷಿತರು ದೇವಿಯ ಆರಾಧನೆಯನ್ನೂ, ದೇವಿಯ ಸೌಂದರ್ಯವನ್ನೂ ಮನೋಹರವಾಗಿ ವರ್ಣಿಸಿದ್ದಾರೆ. ಅಂತಹ ಮಹಾನ್ ಕೃತಿಗಳಲ್ಲಿ ಬಹು ಮುಖ್ಯವಾದುದು ಶ್ರೀಚಕ್ರರಾಜ ಸಿಂಹಾಸನೇಶ್ವರಿ ಶ್ರೀ ಲಲಿತಾಂಬಿಕೆಯೇ. ಈ ಕೃತಿಯು ಶ್ರೀಚಕ್ರ ಸಿಂಹಾಸನೇಶ್ವರಿಯಾದ ಲಿಲಿತಾಂಬಿಕೆಗೆ ಮೀಸಲಾಗಿದೆ. ಶ್ರೀ ಚಕ್ರರಾಜ ಸಿಂಹಾಸನೇಶ್ವರಿ– ಶ್ರೀ ಚಕ್ರಕ್ಕೆ ಸಿಂಹಾಸನೇಶ್ವರಿಯಾಗಿ, ಎಲ್ಲರಿಗೂ ಒಡತಿಯಾಗಿ ನಿಂತವಳು ತ್ರಿಪುರಸುಂದರಿ. ಶ್ರೀಚಕ್ರ ರಾಜೇಶ್ವರಿ ಚಕ್ರಗಳಿಗೆ ರಾಜ. ಅದು ರಥವಾಗಿ ಎಲ್ಲಾ ಚಕ್ರಗಳಿಗೆ ಮತ್ತು ಯಂತ್ರಗಳಿಗೆ ರಾಜನಾಗಿ ಇರುವಂತಹದ್ದು. ಅಂತಹ ಶ್ರೀಚಕ್ರ ರಾಜವನ್ನು ಬಹಳ ಸೂಕ್ಷ್ಮವಾಗಿ ಅರ್ಥಮಾಡಿಕೊಳ್ಳಬೇಕೆಂದರೆ, ಸೂಕ್ಷ್ಮ ಸ್ಥಿತಿಯಲ್ಲಿ ಈ ವಿಚಾರಗಳನ್ನು ತಿಳಿಯಬೇಕೆಂದರೆ ನಾವು ನಮ್ಮ ದೀಕ್ಷಿತರ ಕೃತಿಗಳನ್ನು ಅನುಸರಿಸಬೇಕು. ದೀಕ್ಷಿತರ ಕೃತಿಗಳಲ್ಲಿ ಶ್ರೀಚಕ್ರರಾಜನ ಕುರಿತಾಗಿ, ವೈಜ್ಞಾನಿಕವಾಗಿ, ಅರ್ಥಭರಿತವಾದ ಕೃತಿಗಳಲ್ಲಿ ಉಲ್ಲೇಖಿಸಿದ್ದಾರೆ ಇಂತಹ ವಿಶೇಷವಾದ ಶ್ರೀ ಚಕ್ರದ ಆರಾಧನೆಯನ್ನು ನಾವೆಲ್ಲ ತಿಳಿದಿರುವಂತೆ ಅದರ ಆರಾಧನೆ ಆಗಲಿ, ಸಾಧನೆ ಆಗಲಿ, ಅರ್ಚನೆಯಾಗಲಿ ಮಾಡುವುದು ಅಲ್ಲ. ವೈಜ್ಞಾನಿಕ ದೃಷ್ಟಿ ದೋಷ ವೈಜ್ಞಾನಿಕ ದೃಷ್ಟಿಯಿಂದ ನೋಡಿದಾಗ, ನಮ್ಮ ಶರೀರ 9 ರಂಧ್ರಗಳನ್ನು ಹೊಂದಿದೆ. ಆ ಒಂಭತ್ತು ರಂಧ್ರಗಳು ಒಂಭತ್ತು ವಿಧವಾದ ತತ್ವಗಳನ್ನು ಸಾರುತ್ತದೆ. ಆ ವಿಶೇಷವಾಗಿರುವ ತತ್ವಗಳಿಗೆ ಸರಿಯಾಗಿ ನಮ್ಮ ಶರೀರದಲ್ಲಿ ಆರು ಚಕ್ರಗಳು ಇವೆ. ಆ ಆರೂ ಚಕ್ರಗಳಲ್ಲಿ ಸಂಚಾರ ಮಾಡುವ ಶಕ್ತಿ ಕುಂಡಲಿನಿಯ ಮೂಲದಲ್ಲಿದೆ. ಅದೇ ರೀತಿಯಲ್ಲಿ ಒಬ್ಬ ಮನುಷ್ಯ ಕೂತಿರುವಂತಹಾ ಸ್ಥಿತಿಯಲ್ಲಿ, ಪಿರಮಿಡ್ ಅನ್ನು ಹೊಂದಿಸಿ ನೋಡಿದಾಗ, ಅದನ್ನು ಶರೀರದ ಜೊತೆಯಾಗಿ ಒಂಭತ್ತು ಭಾಗಗಳನ್ನಾಗಿ ಮಾಡಿದರೆ, ಅದನ್ನು ಶ್ರೀಚಕ್ರದ ಒಂಭತ್ತು ಭಾಗಗಳಾಗಿ ನಮಗೆ ಕಾಣಲಿಕ್ಕೆ ಸಿಗುತ್ತದೆ. ಅದ್ಭುತವಾದ ವೈಜ್ಞಾನಿಕ ತತ್ವ ಇದು. ನಮ್ಮ ಶರೀರದಲ್ಲಿ ಆಗುವಂತಹಾ ಉಸಿರಿನ ಅಥವಾ ಶ್ವಾಸದ ಸಂಚಾರ ಒಂದು ವಿಶೇಷವಾದ ತತ್ವ. ಇದಕ್ಕೆ ವಾಸಿಯೋಗ ಅಂತ ಹೆಸರು. ಇದರಲ್ಲಿ ನಮ್ಮ ಶರೀರದಲ್ಲಿ ಇರುವಂತಹ ಇಡಾ ಹಾಗೂ ಪಿಂಗಳ ನಾಡಿಗಳ ಮುಖಾಂತರ ಆಗುವಂತಹ ಶ್ವಾಸವನ್ನು ನೋಡಿ ನಮ್ಮ ಶರೀರದ ಸ್ಥಿತಿಯನ್ನು ಹೇಳುತ್ತೇವೆ. ಇದರ ಮಧ್ಯದಲ್ಲಿ ಇರುವುದೇ ಸುಷುಮ್ನಾ ನಾಡಿ. ಶರೀರದ ವಾತ, ಪಿತ್ಥ, ಕಫ ಎಲ್ಲ ಸಮತೋಲನದಲ್ಲಿ ಇದ್ದರೆ, ಆ ಸುಷುಮ್ನಾ ನಾಡಿಯ ಸ್ಥಿತಿಯನ್ನು ನಾವು ನೋಡಬಹುದು. ಸುಷುಮ್ನಾ ನಾಡಿಯ ಸಂಚಾರವನ್ನು ನಾವು ಅನುಭವಿಸಬಹುದು. ಅದನ್ನು ಪ್ರಾಣಾಯಾಮ ಕ್ರಿಯೆಯ ಮೂಲಕ ನಾವು ನೋಡುತ್ತೇವೆ. ಅದೇ ರೀತಿಯಲ್ಲಿ ಶ್ರೀಚಕ್ರದಲ್ಲಿರುವ ಒಂಭತ್ತು ಆವರಣಗಳಲ್ಲಿ ಇರುವಂತಹಾ ಎಲ್ಲಾ ದೇವತೆಗಳನ್ನು ಕುರಿತು ದೀಕ್ಷಿತರು ಒಂಭತ್ತು ಕೃತಿಗಳನ್ನು ರಚನೆ ಮಾಡುತ್ತಾರೆ. ಅವುಗಳ ಮೂಲಕ ನಮ್ಮ ಶರೀರ ಪಂಚಕೋಶಗಳ ಆನಂದದ ಅನುಭವವನ್ನು ಅವರು ಪಡೆಯುತ್ತಾರೆ. ಅದನ್ನು ಈ ಒಂಭತ್ತು ಕೃತಿಗಳಲ್ಲಿ ಅವರು ವಿವರಿಸಿದ್ದಾರೆ. ಆ ಪಂಚಕೋಶಗಳ ಅನುಭವವನ್ನು ಅದ್ಭುತವಾಗಿ ಅವರ ಕೃತಿಗಳಲ್ಲಿ ಸೇರಿಸಿದ್ದಾರೆ. ಒಂದು ಕೃತಿಯನ್ನು ಹಾಡಿದರೆ ಯಾವ ರೀತಿ ನಮ್ಮ ಶರೀರದ ಅನುಭವಗಳನ್ನು ಪಡೆಯುತ್ತವೆ ಅನ್ನುವುದನ್ನು ವಿವರಿಸುತ್ತಾರೆ. ತ್ರೈಲೋಕ ಮೋಹನ ಚಕ್ರ ಎನ್ನುವುದು ಮೊದಲನೆಯ ಆವರಣ ಅಥವಾ ಚಕ್ರದಲ್ಲಿ ಬರುವ ದೇವತೆ. ಇದು ವಿಶೇಶವಾಗಿ ನಮ್ಮ ಮೂಲಾಧಾರವನ್ನು ದೃಢೀಕರಿಸುವುದಕ್ಕೋಸ್ಕರ ಈ ಆರಾಧನೆಯನ್ನು ಮಾಡುತ್ತಾರೆ. ಆ ಮೂಲಾಧಾರವನ್ನು ಅಥವಾ ಮೂಲಾಧಾರ ಶಕ್ತಿಯನ್ನು, ಚೈತನ್ಯವನ್ನು ಸೃಷ್ಟಿ ಮಾಡುವುದಕ್ಕೆ ಅಥವಾ ಸ್ಥಿರವಾಗಿ ಇಟ್ಟುಕೊಳ್ಳುವುದಕ್ಕೆ ಮೊದಲನೆಯ ಕೃತಿಯನ್ನು ರಚನೆ ಮಾಡುತ್ತಾರೆ. ಈ ರೀತಿಯಾಗಿ ಒಂಭತ್ತು ಆವರಣಗಳಿಗೆ ಹೋಗುವಷ್ಟರಲ್ಲಿ, ನಮ್ಮ ಸಹಸ್ರನಾಮದಲ್ಲಿ ಹೇಳಿರುವಂತೆ ?ಸುಧಾಸಾಗರ ಮಧ್ಯಸ್ಥಾ? ಅಂದರೆ ಸುಧಾಸಾಗರ ಎಂಬ ಸಾಗರವನ್ನು ನಾವು ತಲುಪುತ್ತೇವೆ. ಇಂತಹ ಅದ್ಭುತವಾದಂತಹ ಯೋಗಶಾಸ್ತ್ರವನ್ನು, ಯೋಗವನ್ನು ಮತ್ತು ತತ್ವಶಾಸ್ತ್ರವನ್ನು ವಾಸಿಯೋಗವನ್ನು ಅಥವಾ ಶ್ರೀವಿದ್ಯೆಯನ್ನು

ಸಂಯೋಜಿಸಿದ ಶ್ರೀ ಚಕ್ರದ ಒಂಬತ್ತು ಆವರಣಗಳನ್ನು ಕುರಿತಾದ 'ಕಮಲಾಂಬ ನವಾವರಣ ಕೃತಿಗಳನ್ನು ರಚನೆ ಮಾಡುತ್ತಾರೆ. ಅಂದರೆ ?ಶ್ರೀವಿದ್ಯಾ?ವನ್ನು ಆರಾಧನೆ ಮಾಡುವವವರಿಗೆ ಹೇಗೆ ಇದು ಒಂದು ಅದ್ಭುತವಾದ ಮಾಣಿಕ್ಯವಾಗಿ ಕೈವಲ್ಯವನ್ನು ಪಡೆಯಬಹುದು? ಎಂಬುದನ್ನು ಈ ಕೃತಿಗಳನ್ನು ಅಭ್ಯಾಸ ಮಾಡುವುದರಿಂದ, ಕೇಳುವುದರಿಂದ ಪಡೆಯಬಹುದು. ಈ ಸ್ಥಿತಿ ಎಲ್ಲರಿಗೂ ಬರಬೇಕು, ಎಲ್ಲರೂ ಕೈವಲ್ಯ ಅವಸ್ಥೆಯನ್ನು ಅನುಭವಿಸಬೇಕು ಎನ್ನುವ ಪ್ರಯತ್ನದಲ್ಲಿ ನಮ್ಮ ಸಂಸ್ಥೆಯಾದಂತಹ ಕೈವಲ್ಯ ಚಿಂತಾಮಣಿ, ?ಸ್ವರಕೈವಲ್ಯ? ಎಂಬ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸುತ್ತಿದ್ದೇವೆ. ನಮ್ಮ ಭಾರತರತ್ನ ಎಮ್ ಎಸ್ ಸುಬ್ಬುಲಕ್ಷ್ಮಿ ಯವರ ಮೊಮ್ಮಕ್ಕಳಾದ ಐಶ್ವರ್ಯ ಹಾಗೂ ಸೌಂದರ್ಯರವರು ದೀಕ್ಷಿತರ ಕೃತಿಗಳನ್ನು ಹಾಡುತ್ತಾರೆ. ದೀಕ್ಷಿತರ ಕೃತಿಗಳಲ್ಲಿ ಇರುವ ತತ್ವಾರ್ಥವನ್ನು ನಾವು ನಿಮಗೆ ಪ್ರಸ್ತುತಿ ಪಡಿಸುತ್ತಿದ್ದೇವೆ. ಸ್ವರಕೈವಲ್ಯಮ್, ಸ್ವರದಿಂದ ಕೈವಲ್ಯವನ್ನು ಪಡಿಯುವ ಒಂದು ಸ್ಥಿತಿ. ರಾಗದಿಂದ ಶರೀರದಲ್ಲಿ ಆಗುವ ಅನುಭವ ಏನು? ರಾಗದಿಂದ ಶರೀರದಲ್ಲಿ ಉತ್ಪತ್ತಿಯಾಗುವ ಚೈತನ್ಯ ಶಕ್ತಿ ಏನು? ರಾಗದಿಂದ ಶರೀರದಲ್ಲಿ ಉತ್ಪತ್ತಿಯಾಗುವ ಚೈತನ್ಯ ಶಕ್ತಿಗೆ ಶ್ರೀಚಕ್ರ ದೇವತೆಗಳ ಬೆಂಬಲವೇನು ಎಂಬುದು ಈ ಕಾರ್ಯಕ್ರಮದಲ್ಲಿ ಪ್ರಸ್ತುತ ಪಡಿಸಲಿದ್ದೇವೆ. ಇದುವೇ ತ್ರಿವೇಣಿ ಸಂಗಮ. ಎಲ್ಲರನ್ನು ನಾನು ಕಾರ್ಯಕ್ರಮದಲ್ಲಿ ಭೇಟಿ ಮಾಡುತ್ತೇನೆ

. ಶ್ರೀಮಾತ್ರೇ ನಮಃ.
ಶ್ರೀ ಸ್ವಪ್ರಕಾಶಾನಂದನಾಥ
ಕೈವಲ್ಯ ಚಿಂತಾಮಣಿ ಸಂಸ್ಥೆ
ಬೆಂಗಳೂರು.
(ಸಂಪರ್ಕ : 77952 13707)



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,